# ಹಂಪಿ ಟೈಮ್ಸ್
HAMPI TIMES
ಕನ್ನಡ ದಿನಪತ್ರಿಕೆ
KANNADA DAILY
ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA




ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ.
ಹಂಪಿ ಟೈಮ್ಸ್ ಇ-ಪೇಪರ್ ಓದುಗರ ಸಂಖ್ಯೆ
55,000 Plus readers
9448633038
Place Your Ads
Reach New Audience
hampitimes@gmail.com Valmiki Circle, Hosapete-583201



ಸಂಪುಟ:01 Volume:01 • ಸಂಚಿಕೆ:300 Issue:300 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 28.04.2024 28.04.2024 • ಭಾನುವಾರ Sunday • ಪುಟ:04 Page:04 • ಬೆಲೆ:2 Rs:2



S.M.TRADERS & SERVICES
ATLAS COPCO
COMPRESSORS, HOSEPIPE, DRILL RODS,SPARE PARTS Etc.
Contact for Details
96866 63125
96866 63132
96864 13132
Hampi Road, Hosapete-583201

MASSEY FERGUSON TAFE
ವಿಜಯಶ್ರೀ ಮೋಟಾರ್ಸ್ (ಟ್ರ್ಯಾಕ್ಟರ್ ವಿಭಾಗ)

99801 27607
73533 06719

ವಿವೇಕಶ್ರೇಯಾಲಾಪ
ಸಂಗೀತ ತರಬೇತಿ
VIVĒKASRĒYĀLĀPA
VEENA INSTRUMENTAL VOCAL - KARNATIC AND FILM MUSIC Classes
contact for more information
91082 26938
90368 65666
Near Honda Showroom, Hospaete-583201


ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

# ವಿಜಯನಗರಕ್ಕೆ ಮೋದಿ ಕ್ಷಣಗಣನೆ

## ಪ್ರಧಾನಿ ಭದ್ರತೆಗಾಗಿ ಸೇನೆಯಿಂದ ವೈಮಾನಿಕ ಸಮೀಕ್ಷೆ | ಸಂಚಾರ ಮಾರ್ಗಗಳ ಬದಲಾವಣೆ





■ **ಹಂಪಿ ಟೈಮ್ಸ್ ಹೊಸಪೇಟೆ**

ಮೇ.7 ರಂದು ಜರುಗಲಿರುವ ಲೋಕಸಭಾ ಚುನಾವಣೆ ನಿಮಿತ್ತ ಬಳ್ಳಾರಿ, ಕೊಪ್ಪಳ ಹಾಗೂ ರಾಯಚೂರು ಲೋಕಸಭಾ ಅಭ್ಯರ್ಥಿಗಳ ಪರ ಏ.28 ರಂದು ಸಂಜೆ 6ಕ್ಕೆ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಬೃಹತ್ ಸಮಾವೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ಪ್ರಚಾರ ಮಾಡಲಿದ್ದಾರೆ.

ನಗರದಕ್ಕೆ ಪ್ರಧಾನಿ ಸೇರಿದಂತೆ ಗಣ್ಯ-ಅತಿಗಣ್ಯರು ಆಗಮಿಸುತ್ತಿರುವುದರಿಂದ ಭದ್ರತೆಗಾಗಿ ವಿಜಯನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಲ್. ಶ್ರೀಹರಿಬಾಬು ಅಗತ್ಯ ಸಿದ್ಧತೆ ಕೈಗೊಂಡಿದ್ದು, ಭಾರಿ ಬಂದೋಬಸ್ತಿಗಾಗಿ ಸಿಬ್ಬಂದಿಗಳ ನಿಯೋಜನೆ ಸೇರಿದಂತೆ ಅಗತ್ಯಕ್ರಮವಹಿಸಿದ್ದಾರೆ.

ನಗರದ ವಿವಿಧೆಡೆ 200 ಸಿಸಿ ಕ್ಯಾಮರಗಳನ್ನು ಅಳವಡಿಸಲಾಗಿದ್ದು, ಮೂರು ಜಿಲ್ಲೆಗಳಿಂದ ನಾಲ್ವರು ಎಸ್ಪಿ, ನಾಲ್ವರು ಹೆಚ್ಚುವರಿ ಎಸ್ಪಿ, 17 ಡಿಎಸ್‌ಪಿ, 37 ಸಿಪಿಐ, 73 ಪಿಎಸ್‌ಐ, 113 ಎಎಸ್‌ಐ, 1100 ಹೆಚ್.ಸಿ/ಪಿ.ಸಿ., 500 ಗೃಹರಕ್ಷಕ ದಳದ ಸಿಬ್ಬಂದಿ, ಹಾಗೂ 8 ಎಎಸ್‌ಸಿ ತಂಡ, 4 ಕೆ.ಎಸ್.ಆರ್.ಪಿ., 5 ಡಿಎಆರ್ ತುಕಡಿಗಳನ್ನು ಭದ್ರತೆಗಾಗಿ ನಿಯೋಜಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಮೋದಿ ಭದ್ರತೆಗಾಗಿ ಸೇನಾಧಿಕಾರಿಗಳು ಪ್ರಧಾನಿ ಮೋದಿ ಭದ್ರತೆಗೆ ನಿಯೋಜನೆಗೊಂಡಿರುವ ಎಸ್‌ಪಿಜಿ ಉನ್ನತಾಧಿಕಾರಿಗಳ ಮಾರ್ಗದರ್ಶನದಲ್ಲಿ ಬೆಂಗಳೂರಿನಿಂದ ಆಗಮಿಸಿದ್ದ ಏರ್‌ಫೋರ್ಸ್‌ನ ಎರಡು ಹೆಲಿಕಾಪ್ಟರ್‌ಗಳು ನಾಲ್ಕೈದು ಬಾರಿ ಆಗಸದಿಂದಲ್ಲಿ ಗಸ್ತು ತಿರುಗಿದವು. ಹೊಸಪೇಟೆ ನಗರ, ತುಂಗಭದ್ರಾ ಡ್ಯಾಂ ಹಾಗೂ ತುಂಗಭದ್ರಾ ನದಿ ಸೇರಿದಂತೆ ಹೊಸಪೇಟೆ ನಗರದ ಸುತ್ತಲಿನ 10 ಕಿ.ಮೀ. ದೂರದವರೆಗೂ ಆಗಸದಲ್ಲಿ ಸಮೀಕ್ಷೆ ನಡೆಸಿತು. ಪ್ರಮುಖವಾಗಿ ಗುಡ್ಡ, ಬೆಟ್ಟ, ಅರಣ್ಯದ ಬಗ್ಗೆಯೂ ಸೇನಾಧಿಕಾರಿಗಳು ಮಾಹಿತಿ ಕಲೆ ಹಾಕಿದ್ದಾರೆ ಎಂದು ತಿಳಿದು ಬಂದಿದೆ.

**ವಾಹನಗಳ ಸಂಚಾರ ಮಾರ್ಗ ಬದಲಾವಣೆ:**

ಕಾನೂನು ಮತ್ತು ಸುವ್ಯವಸ್ಥೆ ದೃಷ್ಟಿಯಿಂದ ಸುಗಮ ಸಂಚಾರಕ್ಕಾಗಿ ಏ.28 ರಂದು ನಗರಕ್ಕೆ ಆಗಮಿಸುವ ಕೆಎಸ್‌ಆರ್‌ಟಿಸಿ ಮತ್ತು ಖಾಸಗಿ ವಾಹನಗಳ ಸಂಚಾರದಲ್ಲಿ ಕೆಲ ಬದಲಾವಣೆ ಮಾಡಿದೆ. ಬೆಂಗಳೂರು, ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ ಕಡೆಯಿಂದ ಹೊಸಪೇಟೆಗೆ ಬರುವ ಕೆ.ಎಸ್.ಆರ್.ಟಿ.ಸಿ ಬಸ್‌ಗಳು ವಿರುಪಾಕ್ಷ ನಾಯಕ ವೃತ್ತ, ಎ.ಪಿ.ಎಂ.ಸಿ ಸರ್ಕಲ್, ವಾಲ್ಮೀಕಿ ಸರ್ಕಲ್, ರಾಮಾ ಸರ್ಕಲ್, ಸ್ವಾಗಿ ಮಾರ್ಕೆಟ್ ಮಾರ್ಗವಾಗಿ ಬಸ್ ನಿಲ್ದಾಣಕ್ಕೆ ಸಾಗುವಂತೆ ಸೂಚಿಸಿದೆ.

ಹೊಸಪೇಟೆಯಿಂದ ಬೆಂಗಳೂರು ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ, ಹರಪನಹಳ್ಳಿ, ಸಂಡೂರು ಕಡೆಗೆ ತೆರಳು ಕೆ.ಎಸ್.ಆರ್.ಟಿ.ಸಿ ಬಸ್‌ಗಳು ಸಿಎಂಸಿ ಸರ್ಕಲ್, ವಾಲ್ಮೀಕಿ ಸರ್ಕಲ್, ಸಂಡೂರು ಬೈಪಾಸ್ ಮಾರ್ಗದಲ್ಲಿ ತೆರಳಬೇಕು. ಸಂಡೂರು ಕಡೆಯಿಂದ ಬರುವ ಬಸ್‌ಗಳು ವಾಲ್ಮೀಕಿ ಸರ್ಕಲ್, ರಾಮಾ ಸ್ವಾಗಿ ಮಾರ್ಕೆಟ್ ಮಾರ್ಗವಾಗಿ ಬಸ್ ನಿಲ್ದಾಣಕ್ಕೆ ಪ್ರವೇಶಿಸುವುದು.

ಕೊಪ್ಪಳ ಕಡೆಯಿಂದ ಬರುವ ಬಸ್‌ಗಳು ಸಾಯಿಬಾಬಾ ವೃತ್ತ, ಎ.ಪಿ.ಎಂ.ಸಿ ಸರ್ಕಲ್, ವಾಲ್ಮೀಕಿ ಸರ್ಕಲ್, ರಾಮಾ ಸರ್ಕಲ್ ಸ್ವಾಗಿ ಮಾರ್ಕೆಟ್ ಮಾರ್ಗವಾಗಿ ಬಸ್ ನಿಲ್ದಾಣಕ್ಕೆ ಪ್ರವೇಶಿಸುವುದು. ಕೊಪ್ಪಳ ಕಡೆಗೆ ಹೋಗುವ ವಾಹನಗಳು ಬಸ್ ನಿಲ್ದಾಣದಿಂದ ಸಿ.ಎಂ.ಸಿ ರಾಮ ಸರ್ಕಲ್, ವಾಲ್ಮೀಕಿ ಸರ್ಕಲ್, ಎ.ಪಿ.ಎಂ.ಸಿ ಸರ್ಕಲ್ ಗುರು ಕಾಲೇಜ್ ಕ್ರಾಸ್, ವಿರುಪಾಕ್ಷ ನಾಯಕ ವೃತ್ತ ಮಾರ್ಗವಾಗಿ ಸಂಚರಿಸುವಂತೆ ಜಿಲ್ಲಾ ಪೊಲೀಸ್ ಇಲಾಖೆ ಸೂಚಿಸಿದೆ.

## ವಾಹನಗಳ ಪಾರ್ಕಿಂಗ್ ವ್ಯವಸ್ಥೆ

ಬೆಂಗಳೂರು, ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ, ಹಡಗಲಿ, ಹರಪನಹಳ್ಳಿ ಕಡೆಯಿಂದ ಸಾರ್ವಜನಿಕರನ್ನು ಕರೆ ತರುವ ವಾಹನಗಳು ಬಸವೇಶ್ವರ ವೃತ್ತದಲ್ಲಿ ಸಾರ್ವಜನಿಕರನ್ನು ಇಳಿಸಿ, ನ್ಯಾಷನಲ್ ಕಾಲೇಜು ಗೌಂಡ್, ಗುರು ಕಾಲೇಜು ಎದುಗಡೆ ಇರುವ ಖಾಲಿ ಜಾಗ, ಪಿಡಿಐಟಿ ಕಾಲೇಜು ಮೈದಾನ, ಭವರ್‌ಲಾಲ್ ಲೇ-ಔಟ್, ಸಿದ್ಧಾರ್ಥ ಎನ್‌ಕ್ಲೇವ್ ಪಾರ್ಕಿಂಗ್ ಸ್ಥಳಗಳಲ್ಲಿ ನಿಲುಗಡೆ ಮಾಡಬೇಕು.

ಕೊಪ್ಪಳ ಕಡೆಯಿಂದ ಬರುವ ವಾಹನಗಳು ಸಾಯಿಬಾಬ ವೃತ್ತದಲ್ಲಿ ಜನರನ್ನು ಇಳಿಸಿ, ಟಿ.ಬಿ.ಡ್ಯಾಂ ಪಾರ್ಕಿಂಗ್, ಜೂನಿಯರ್ ಕಾಲೇಜು ಮೈದಾನ ಮತ್ತು ಡಿಎಆರ್ ಗೌಂಡ್‌ನಲ್ಲಿ ವಾನಗಳನ್ನು ಪಾಕ್ ಮಾಡಬೇಕು. ಸಂಡೂರು ಕಡೆಯಿಂದ ಬರುವ ವಾಹನಗಳು ಮಾರ್ಕಂಡೇಶ್ವರ ವೃತ್ತಗಳಲ್ಲಿ ಸಾರ್ವಜನಿಕರನ್ನು ಇಳಿಸಿ, ಎಲ್.ಎಫ್.ಎಸ್. ಶಾಲೆ ಮೈದಾನ ಮತ್ತು ವಾಲ್ಮೀಕಿ ಶಾಲೆ ಮೈದಾನ, ದೀಪಾಯನ ಶಾಲೆ ಮೈದಾನಗಳಲ್ಲಿ ಪಾರ್ಕಿಂಗ್ ಮಾಡಬೇಕು.

ಬಳ್ಳಾರಿ ಕಡೆಯಿಂದ ಬರುವ ವಾಹನಗಳು ಗಾಂಧಿಚೌಕ್ ಹತ್ತಿರ ಜನರನ್ನು ಇಳಿಸಿ, ಬಳ್ಳಾರಿ ರಸ್ತೆಯ ಪಟೇಲ್ ಹೈಸ್ಕೂಲ್ ಗೌಂಡ್‌ನಲ್ಲಿ ನಿಲ್ಲಿಸಬೇಕು. ಗಂಗಾವತಿ-ಕಂಪ್ಲಿ ಕಡೆಯಿಂದ ಬರುವ ವಾಹನಗಳು ಪುಣ್ಯಮೂರ್ತಿ ಮತ್ತು ತ್ರಿ-ಶಾಪ್ ಸರ್ಕಲ್‌ಗಳಲ್ಲಿ ಇಳಿಸಿ, ಲಕ್ಷ್ಮಿ ಸರ್ಕಲ್, ಮಲ್ಲಿಗೆ ಕ್ರಾಸ್ ಮುಖಾಂತರ ಪಿಬಿಎಸ್ ಖಾಲಿಜಾಗ, ವಾಸವಿ ಶಾಲೆ ಮೈದಾನದಲ್ಲಿ ಪಾರ್ಕಿಂಗ್ ಮಾಡುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿ ಬಾಬು ಸೂಚಿಸಿದ್ದಾರೆ.



**ಬಿಸಿಲಿನ ತಾಪಮಾನ ಅಧಿಕವಾಗಿರುವುದರಿಂದ ಸಂಜೆ 6ಕ್ಕೆ ಪ್ರಧಾನಿ ಮೋದಿಜಿ ವೇದಿಕೆಗೆ ಆಗಮಿಸಲಿದ್ದಾರೆ. ಮೂರು ಜಿಲ್ಲೆಗಳ ಅಭ್ಯರ್ಥಿಗಳು ಸೇರಿದಂತೆ 48 ಗಣ್ಯಾತಿಗಣ್ಯರು ಉಪಸ್ಥಿತರಿತಲಿದ್ದಾರೆ. 1.50 ಲಕ್ಷ ಜನರಿಗೆ ಕೂಡಲು ಆಸನ ವ್ಯವಸ್ಥೆ ಸೇರಿದಂತೆ ಕುಡಿಯುವ ನೀರು, ಅಗತ್ಯ ವ್ಯವಸ್ಥೆ ಮಾಡಲಾಗಿದೆ.**

**– ಚನ್ನಬಸವನಗೌಡ ಪಾಟೀಲ್, ಜಿಲ್ಲಾಧ್ಯಕ್ಷರು, ವಿಜಯನಗರ**


# ಹಾರ್ದಿಕ ಅಭಿನಂದನೆಗಳು

ಏಪ್ರಿಲ್ 29 ಮತ್ತು 30 2024 ರಂದು
ಧಾರವಾಡದಲ್ಲಿ ನಡೆಯಲಿರುವ
ಕರ್ನಾಟಕ ಶಾಸನ ಸಾಹಿತ್ಯ ಪರಿಷತ್ತಿನ
ಮೊದಲ ಮಹಾಧಿವೇಶನದ ಸರ್ವಾಧ್ಯಕ್ಷರಾಗಿ
ಆಯ್ಕೆಯಾಗಿರುವ
ಕನ್ನಡ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ
ಡಾ.ಡಿ.ವಿ.ಪರಮಶಿವಮೂರ್ತಿ
ಇವರಿಗೆ ಹಾರ್ದಿಕ ಅಭಿನಂದನೆಗಳು





-: ಶುಭ ಕೋರುವವರು :-
ಹಂಪಿ ಟೈಮ್ಸ್ ಬಳಗ, ಹೊಸಪೇಟೆ, ವಿಜಯನಗರ ಜಿಲ್ಲೆ

ಹಂಪಿ ಟೈಮ್ಸ್ ಸಂ|ಪಾ|ದ|ಕೀ|ಯ

# ದುಬಾರಿ ದುನಿಯಾದಲ್ಲಿ ಶಿಕ್ಷಣದ ಶುಲ್ಕದ ಹೊರೆ

ಇನ್ನೇನು ಜೂನ್ ಸಮೀಪದಲ್ಲಿದೆ. ಹೊಸ ಶೈಕ್ಷಣಿಕ ವರ್ಷ ಮತ್ತೆ ಮರುಕಳಿಸಲಿದೆ. ಎಲ್ಲ ಕಡೆ ಶಿಕ್ಷಣ ಮತ್ತು ಶೈಕ್ಷಣಿಕ ಚಟುವಟಿಕೆಗಳು ಈಗಾಗಲೇ ಸಾಕಷ್ಟು ವೇಗ ಪಡೆದುಕೊಂಡಿವೆ. ದುರಂತವೆಂದರೆ ಬೆಲೆ ಏರಿಕೆ ಮತ್ತಷ್ಟು ದುಬಾರಿ ಎನಿಸಿದೆ. ಬೆಲೆ ಏರಿಕೆ ಬಿಸಿ ಶಿಕ್ಷಣ ಕ್ಷೇತ್ರದಲ್ಲೂ ಜೋರಾಗಿ ತಟ್ಟುತ್ತಿದೆ. ವರ್ಷದಿಂದ ವರ್ಷಕ್ಕೆ ಈ ಶಿಕ್ಷಣ ವೆಚ್ಚ ಹೆಚ್ಚುತ್ತಲೇ ಸಾಗಿದೆ. ಇದು ವಿಪರ್ಯಾಸ ಮತ್ತು ಆತಂಕದ ಸಂಗತಿ. ತಮಾಷೆಯೆಂದರೆ ಶಿಕ್ಷಣ ಎಲ್ಲರ ಕೈಗೆ ಎಟಕುವಂತಿರಬೇಕು ಮತ್ತು ಎಲ್ಲರಿಗೂ ಗುಣಮಟ್ಟದ ಶಿಕ್ಷಣ ದೊರೆಯಬೇಕು ಎಂದು ಸರ್ಕಾರ ಹೇಳುತ್ತದೆ. ಆದರೆ, ವಾಸ್ತವವೇ ಬೇರೆಯಿದೆ. ಇದಷ್ಟೇ ಅಲ್ಲ, ಇದ್ದವರು ಮತ್ತು ಇರಲಾದವರ ನಡುವಿನ ಆರ್ಥಿಕ ಮಟ್ಟ ಗಣನೀಯ ಪ್ರಮಾಣದಲ್ಲಿ ವ್ಯತ್ಯಾಸವಾಗುತ್ತಿದೆ. ಶೈಕ್ಷಣಿಕ ಸಂಸ್ಥೆಗಳಂತೂ ಅವರು ಆಡಿದ್ದೇ ಆಟ ಎಂಬಂತಾಗಿದೆ. ಪಟ್ಟಣ ಮತ್ತು ಮಹಾನಗರಗಳಲ್ಲಿನ ಶಾಲಾ–ಕಾಲೇಜುಗಳಂತೂ ಸರ್ಕಾರದ ಯಾವುದೇ ಮಾನದಂಡವನ್ನು ಪಾಲಿಸುತ್ತಿಲ್ಲ ಮತ್ತು ಪಾಲಿಸದೆ ಇರುವುದು ಇದೇ ಮೊದಲಲ್ಲ. ಪ್ರತಿ ವರ್ಷ ವಿದ್ಯಾರ್ಥಿಗಳ ಶುಲ್ಕ ಕಡಿಮೆಯೆಂದರೂ ಶೇಕಡ 10ರಷ್ಟಾದರೂ ಏರಿಕೆ ಆಗುತ್ತಲೇ ಇದೆ. ಇದು ವಿದ್ಯಾರ್ಥಿಗಳ ಪಾಲಕರಿಗೆ ತೀವ್ರ ಹೊರೆಯಾಗುತ್ತದೆ ಎಂಬುದು ಬೇರೆ ಹೇಳಬೇಕಿಲ್ಲ. ಕರೊನಾ ಕರಿದಿನಗಳು ನಂತರವಂತೂ ಶಿಕ್ಷಣ ಸಂಸ್ಥೆಗಳು ಗಣನೀಯ ಎನ್ನುವಷ್ಟು ದುಂಡಗಾಗಿವೆ. ಇಲ್ಲಿ ಶಿಕ್ಷಣ ಎಂಬ ಹೆಸರಿನಲ್ಲಿ ಪಾಲಕರ ಸುಲಿಗೆ ನಡೆಯುತ್ತದೆ. ಯಾವ ಅಧಿಕಾರಿಗಳಾಗಲಿ, ಸರ್ಕಾರಗಳಾಗಲಿ ಏನೂ ಮಾಡದ ಅಸಹಾಯಕ ಸ್ಥಿತಿಯಲ್ಲಿವೆ. ಪಾಲಕರಂತೂ ಶಾಲಾ ಮತ್ತು ಕಾಲೇಜು ಶುಲ್ಕ ಕಟ್ಟಲು ಜೀವನ ಪೂರ್ತಿ ದುಡಿಯಬೇಕಾದ ಪರಿಸ್ಥಿತಿ ಬಂದೊದಗಿದೆ. ಒಂದೊಮ್ಮೆ ಶಾಲೆಯನ್ನು ಬದಲಾಯಿಸಿದರೂ ಒಂದೆರಡು ಸಾವಿರ ರೂ. ವ್ಯತ್ಯಾಸ ಬಿಟ್ಟರೆ ಅಂಥ ಬದಲಾವಣೆ ಇರುವುದಿಲ್ಲ. ಆದರೆ, ಶಾಲೆ ಬದಲಾದರೆ ದಿನಚರಿ ಮತ್ತು ಮಕ್ಕಳ ಮಾನಸಿಕ ಸ್ಥಿತಿ ಮೇಲೂ ಪರಿಣಾಮ ಬೀರುತ್ತದೆ. ಈ ಕಾರಣಕ್ಕೆ ಪಾಲಕರು ಶಿಕ್ಷಣ ಸಂಸ್ಥೆಗಳು ಹೇಳಿದಷ್ಟನ್ನು ಕೊಟ್ಟು ನೋವನ್ನು ಸಹಿಸಿಕೊಳ್ಳುತ್ತಿದ್ದಾರೆ. ಬರೀ ಇದು ಶುಲ್ಕದ ವಿಷಯವಷ್ಟೇ ಅಲ್ಲ. ಪ್ರತಿ ಬಾರಿಯಂತೆ ಈ ಬಾರಿಯೂ



ಪಠ್ಯಪುಸ್ತಕಗಳ ಬೆಲೆಯೂ ಸಹ ಹೆಚ್ಚಾಗಿವೆ. ವಿದ್ಯಾರ್ಥಿಗಳ ಸ್ಕೂಲ್ ಬ್ಯಾಗ್ ಹೊರೆ ತಗ್ಗಿಸುವ ನಿಟ್ಟಿನಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಒಂದೇ ವಿಷಯವನ್ನು ಎರಡು ಭಾಗಗಳಾಗಿ ವಿಂಗಡಿಸಿ, ಈ ಬಾರಿ ಪುಸ್ತಕ ಮುದ್ರಿಸಲು ತೀರ್ಮಾನಿಸಿದೆ. ಇದರಿಂದಲೂ ಪಠ್ಯಪುಸ್ತಕಗಳ ಬೆಲೆ ಏರಿಕೆಯಾಗುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ. ಇದಲ್ಲದೆ ನೋಟ್ ಬುಕ್‌ಗಳು, ಪೆನ್, ಪೆನ್ಸಿಲ್, ಇತರೆ ಸಾಮಗ್ರಿಗಳ ಬೆಲೆಯೂ ದುಬಾರಿ ಆಗಿರುವುದು ಪಾಲಕರಿಗೆ ಶಾಕ್ ನೀಡಿವೆ. ಮಧ್ಯಮ ಕುಟುಂಬ ಮತ್ತು ಬಡವರು ತಾವು ಸಂಪಾದಿಸಿದ್ದನ್ನೆಲ್ಲ ಮಕ್ಕಳ ಎಜುಕೇಷನ್ನಿಗೆ ವಿನಿಯೋಗಿಸಿದರೆ ಅವರ ದೈನಂದಿನ ಜೀವನದ ಕತೆಯೇನು? ಊಟ–ಬಟ್ಟೆ, ಕಷ್ಟ–ಸುಖ, ಆರೋಗ್ಯ–ಅನಾರೋಗ್ಯವನ್ನು ಸಂಭಾಳಿಸುವುದು ಹೇಗೆ? ಒಟ್ಟಿನಲ್ಲಿ ದುಡಿಮೆಯಿಂದ ಬಂದ ಬಜೆಟ್‌ನಲ್ಲಿ ಸಾಕಷ್ಟು ಏರುಪೇರು ಆಗುವುದನ್ನು ತಪ್ಪಿಸಲು ಆಗುವುದಿಲ್ಲ. ಶೈಕ್ಷಣಿಕ ಕ್ಷೇತ್ರದಲ್ಲಿ ಶಾಲಾ–ಕಾಲೇಜು ಶುಲ್ಕ, ಪಠ್ಯಪುಸ್ತಕ, ಲೇಖನ ಸಾಮಗ್ರಿ ಎಲ್ಲದರ ಬೆಲೆಯೂ ಹೀಗೆ ಏರಿಕೆಯಾದರೆ ಪಾಲಕರ ಜತೆ ಮಕ್ಕಳ ಮನಸಿನ ಮೇಲೆ ಪರಿಣಾಮ ಬೀರುವುದನ್ನು ತಳ್ಳಿಹಾಕುವಂತಿಲ್ಲ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ. **ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ–ಮೇಲ್:hampitimes@gmail.com
M: 9448633038

ಜಾಹೀರಾತಿಗಾಗಿ ಸಂಪರ್ಕಿಸಿ:
Contact for
EVENT COVERAGE
& Advertisements
in Leading
Hampi Times
Daily News Paper
M: 94486 33038

ಏಪ್ರಿಲ್ 29 ಮತ್ತು 30 ರಂದು ಧಾರವಾಡದಲ್ಲಿ ನಡೆಯಲಿರುವ ಕರ್ನಾಟಕ ಶಾಸನ ಸಾಹಿತ್ಯ ಪರಿಷತ್ತಿನ ಮೊದಲ ಮಹಾಧಿವೇಶನ 2024ರ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಶಾಸನತಜ್ಞರು, ವಿದ್ವಾಂಸರು, ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ.ಡಿ.ವಿ.ಪರಮಶಿವಮೂರ್ತಿ ಅವರು ಆಯ್ಕೆಯಾಗಿದ್ದಾರೆ.


# ಕ್ರಿಯಾಶೀಲತೆಗೆ ಸಾಕ್ಷಿ ಪರಮಶಿವಮೂರ್ತಿ

ಸಾಹಿತ್ಯ, ಶಾಸನ, ಶಾಸನ ಸಾಹಿತ್ಯ, ಸಂಸ್ಕೃತಿ ಅಧ್ಯಯನ, ಶೋಧನೆ, ವಿಶ್ಲೇಷಣೆಯ ಕಾರ್ಯದಲ್ಲಿ ನಮ್ಮ ತಲೆಮಾರಿನ ವಿದ್ವಾಂಸರಲ್ಲಿ ಪ್ರಮುಖವಾದ ಹೆಸರು ಪ್ರೊ.ಡಿ.ವಿ.ಪರಮಶಿವಮೂರ್ತಿಯವರದ್ದು. ಬೋಧನೆ ಅಧ್ಯಯನ ಸಂಶೋಧನೆಯನ್ನು ಗಂಭೀರವಾಗಿ ಪರಿಗಣಿಸಿರುವವರು. ಅದರಲ್ಲೂ ಶಾಸನಗಳ ಶೋಧನೆ ಅಧ್ಯಯನ – ವಿಶ್ಲೇಷಣೆ ಇವರ ಅತ್ಯಂತ ಆಸಕ್ತಿಯ ಕ್ಷೇತ್ರ. ಈ ಕ್ಷೇತ್ರದಲ್ಲಿ ಕಳೆದ ನಲವತ್ತು ವರ್ಷಗಳಿಂದ ಬಹುಶಿಸ್ತೀಯ ಮತ್ತು ಅಂತರಶಿಸ್ತಿಯ ನೆಲೆಯಲ್ಲಿ ಗಂಭೀರವಾದ ಸಂಶೋಧನೆಯನ್ನು ನಡೆಸುತ್ತಾ ಅದರ ಫಲಿತಗಳನ್ನು ನಾಡಿಗೆ ಕೊಟ್ಟವರು. ಹೀಗಾಗಿ ಶಾಸನ ಸಂಶೋಧನೆ ಕ್ಷೇತ್ರದಲ್ಲಿ ಇವರು ತಮ್ಮದೇ ಛಾಪನ್ನು ಮೂಡಿಸಿರುವವರು. ತಮ್ಮ ಅಧ್ಯಯನ ಸಂಶೋಧನಗಳಿಂದ ನಾಡಿನ ತುಂಬಾ ಹೆಸರು ಮಾಡಿರುವ ಇವರು ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದಾರೆ. ಇದೀಗ ಕರ್ನಾಟಕ ಶಾಸನ ಸಾಹಿತ್ಯ ಪರಿಷತ್ತಿನ ಮೊದಲ ಮಹಾಧಿವೇಶನ 2024ರ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಡಾ.ಡಿ.ವಿ ಪರಮಶಿವ ಮೂರ್ತಿಯವರು ಆಯ್ಕೆಯಾಗಿದ್ದಾರೆ. 2024ರ ಏಪ್ರಿಲ್ 29 ಹಾಗೂ 30 ರಂದು ಧಾರವಾಡ(ಧರ್ಮಸ್ಥಳ ರತ್ನ ವರ್ಮ ಹೆಗ್ಡೆ ಸಭಾಂಗಣ ಜನತಾ ಶಿಕ್ಷಣ ಸಂಸ್ಥೆ ವಿದ್ಯಾ ಗಿರಿ ಧಾರವಾಡ) ಇಲ್ಲಿ ಈ ಮಹಾ ಸಮ್ಮೇಳನ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಸಮ್ಮೇಳನದ ಸರ್ವಾಧ್ಯಕ್ಷರ ಕುರಿತು ಒಂದು ಪರಿಚಯಾತ್ಮಕ ಬರಹ.

ಪರಮಶಿವಮೂರ್ತಿ ಇವರು ಸರಳ, ಕ್ರಿಯಾಶೀಲ ವ್ಯಕ್ತಿತ್ವದವರು. ಅಧ್ಯಯನ ಸಂಶೋಧನೆ ಬೋಧನೆ ಇವರ ಅತ್ಯಂತ ಪ್ರೀತಿಯ ಕಾರ್ಯಕ್ಷೇತ್ರ. ವ್ಯಾಪಕ ಅಧ್ಯಯನ ಗಂಭೀರ ಚಿಂತನೆ ಬಹುಶೀಸ್ತೀಯ ಅಧ್ಯಯನ ವಿಶ್ಲೇಷಣೆಗಳಿಂದ ವಿದ್ಯಾರ್ಥಿಗಳಿಗೆ ಅಚ್ಚುಮೆಚ್ಚಿನ ಮೇಷ್ಟ್ರು. ಸಮರ್ಥ ಮಾರ್ಗದರ್ಶಕರು. ಎಂ.ಎ.ಕನ್ನಡ ಮಾಡಿ, "ಕನ್ನಡ ಶಾಸನಗಳ ಶಿಲ್ಪ" ಎಂಬ ವಿಷಯದಲ್ಲಿ ಡಾ.ವಿದ್ಯಾಶಂಕರ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ಕೈಗೊಂಡು ಪಿಎಚ್.ಡಿ ಪದವಿ ಪಡೆದವರು. ನಂತರ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದಲ್ಲಿ ಅರೇಕಾಲಿಕ ಉದ್ಯೋಗಿಯಾಗಿ ತಾಳೆಗರಿಗಳ, ಹಸ್ತಪ್ರತಿಗಳ ಸಂರಕ್ಷಣೆಯ ಕಾರ್ಯದಿಂದ ಪ್ರಾರಂಭಗೊಂಡ ಇವರು ಸಾಹಿತ್ಯದ ಕಾರ್ಯ ಈಗ ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಯ ಹುದ್ದೆಯವರೆಗೆ ಬಂದಿದ್ದಾರೆ. ಹಲವು ಕಾಲೇಜುಗಳಲ್ಲಿ ಆಧ್ಯಾಪಕರಾಗಿ ಕಾರ್ಯನಿರ್ವಹಿಸಿ, ನಂತರ ಹಂಪಿ ಕನ್ನಡ ವಿಶ್ವವಿದ್ಯಾಲಯದ ಶಾಸನ ಶಾಸ್ತ್ರ ವಿಭಾಗದಲ್ಲಿ ಆಧ್ಯಾಪಕರಾಗಿ 14 ವರ್ಷಗಳ ಅಧ್ಯಯನ ಸಂಶೋಧನೆ ಕಾರ್ಯವನ್ನು ಮಾಡಿದವರು. ನಂತರ ತುಮಕೂರು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ, ಡಾ ಡಿ ವಿ ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ, ಡೀನ್ ರಾಗಿ ಮೌಲ್ಯಮಾಪನ ಕುಲ ಸಚಿವರಾಗಿ ಕಾರ್ಯನಿರ್ವಹಿಸಿರುವವರು. ತಮ್ಮ ಆಡಳಿತದಲ್ಲಿ ಪಾರದರ್ಶಕ ಹಾಗೂ ಶಿಸ್ತು ಬದ್ಧ ಆಡಳಿತವನ್ನು ನಡೆಸಿ ಪ್ರಶಂಸನಿಗೆ ಒಳಗಾಗಿರುವುವರು. ಡಾ. ಪರಮಶಿವ ಮೂರ್ತಿಯವರು ಶ್ರಮ ಸಂಸ್ಕೃತಿಯ ಮೂಲಕ ತಮ್ಮ ಬೋಧನೆ ಸಂಶೋಧನೆ ಕಾರ್ಯಗಳಿಂದ ಪ್ರಾಧ್ಯಾಪಕ ಹುದ್ದೆಗೆ ನ್ಯಾಯ ಒದಗಿಸಿದವರು. 40 ವರ್ಷಗಳ ಅಧ್ಯಯನ, ಸಂಶೋಧನೆಯಿಂದ ಇವರು ಕೆಲವು ಪ್ರಮುಖವಾದ ಶಾಸನ ಅಧ್ಯಯನಗಳನ್ನು ನಡೆಸಿ ಶಾಸನ ಕ್ಷೇತ್ರದ ಪ್ರಥಮಗಳಿಗೆ ಇವರು ಕಾರಣರಾಗಿದ್ದಾರೆ

ಇವರ ಕನ್ನಡ ಸಾಹಿತ್ಯದ ಅಧ್ಯಯನ, ಶಾಸನಗಳ ಸಂಶೋಧನಗಳಿಂದ ನಾಡಿಗೆ ಕೊಟ್ಟ ಕೊಡುಗೆ ಅಪಾರ. ಇವರ ಸಾಹಿತ್ಯ, ಸಂಶೋಧನೆಯನ್ನು ಪರಿಗಣಿಸಿಯೇ ಇವರನ್ನು ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳನ್ನಾಗಿ ನೇಮಕಮಾಡಲಾಗಿದೆ. ಆರ್ಥಿಕ ಸಂಕಷ್ಟದಲ್ಲಿರುವ, ಸಂಕ್ರಮಣದ ಸ್ಥಿತಿಯಲ್ಲಿ ಕನ್ನಡ ವಿಶ್ವವಿದ್ಯಾಲಯವನ್ನು ಮುನ್ನಡೆಸುವ ಜವಾಬ್ದಾರಿ ಇವರ ಮೇಲಿದೆ. ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದರು ಶಾಸನಗಳನ್ನ ಹುಡುಕುವ, ಅಧ್ಯಯನ ಮಾಡುವ ಕಾರ್ಯವನ್ನು ಇವರು ಮುಂದುವರಿಸಿದ್ದಾರೆ ಎನ್ನುವುದು ಕುತೂಹಲ ಹಾಗೂ ಆಶ್ಚರ್ಯಮೂಡಿಸುತ್ತದೆ. ಪ್ರತಿಷ್ಠಿತ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದರು ಯಾವುದೇ ಹಮ್ಮು ಬಿಮ್ಮುಗಳಿಲ್ಲದೆ ಸರಳ ಸಜ್ಜನ ವ್ಯಕ್ತಿತ್ವ ದಿಂದ ಕುಲಪತಿ ಹುದ್ದೆಗೆ ಘನತೆ ಗೌರವವನ್ನು ತಂದುಕೊಟ್ಟಿದ್ದಾರೆ. ಡಾ. ಎಂ ಎಂ ಕಲಬುರ್ಗಿಯವರ ನಂತರ ಮತ್ತೊಬ್ಬ ಸರಳ ಸಜ್ಜನಿಕೆಯ ಸಂಶೋಧಕರು ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿರುವುದು ಕನ್ನಡ ವಿಶ್ವವಿದ್ಯಾಲಯದ ಘನತೆಯನ್ನು ಹೆಚ್ಚಿಸಿದೆ. ಇದು ಸಂತೋಷದ ಸಂಗತಿ. ಇವರು ನಲವತ್ತು ವರ್ಷಗಳ ತಮ್ಮ ವೃತ್ತಿ ಮತ್ತು ಪ್ರವೃತ್ತಿಯನ್ನು ಶಾಸನ ಸಂಶೋಧನೆಗೆ ಮೀಸಲೀಟ್ಟವರು. ಇವರ ಈ ನಿಸ್ವಾರ್ಥ ಶಾಸನ ಕ್ಷೇತ್ರದ ಸಮಗ್ರ ಕಾರ್ಯವನ್ನು ಪರಿಗಣಿಸಿ ಮೊಟ್ಟಮೊದಲ ಭಾರಿಗೆ ಧಾರವಾಡದಲ್ಲಿ ಆಯೋಜಿಸಿರುವ ಕರ್ನಾಟಕ ಶಾಸನ ಸಾಹಿತ್ಯ ಪರಿಷತ್ತಿನ ಮೊದಲ ಮಹಾ ಅಧಿವೇಶನ 2024 ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಗೊಂಡಿದ್ದಾರೆ. ಇದಕ್ಕಾಗಿ ಇವರಿಗೆ ಅಭಿನಂದನೆಗಳು ಹಾಗೂ ಶುಭಾಶಯಗಳು ಸಲ್ಲುತ್ತವೆ.

ಡಾ.ಡಿ.ವಿ. ಪರಮಶಿವಮೂರ್ತಿಯವರು ಶಾಸನ ತಜ್ಞರು. ಇವರು ಕನ್ನಡದ ಶ್ರೇಷ್ಠ ವಿದ್ವಾಂಸರುಗಳಾದ ಡಾ. ಎಂ ಚಿದಾನಂದಮೂರ್ತಿ, ಡಾ.ಎಂ.ಎಂ.ಕಲಬುರ್ಗಿ, ಡಾ.ಎಸ್ ವಿದ್ಯಾಶಂಕರ್, ಡಾ.ಹಂಪನಾ, ಡಾ.ಸಿ.ವೀರಣ್ಣ, ಡಾ. ದೇವರಕೊಂಡಾರಡ್ಡಿ,ಡಾ.ಚಂದ್ರಶೇಖರ ಕಂಬಾರ,ಡಾ.ಬಸವರಾಜ ಕಲ್ಗುಡಿ ಮೊದಲಾದ ಹಿರಿಯ ಸಂಶೋಧಕರು, ವಿದ್ವಾಂಸರ ಸಂಪರ್ಕದಲ್ಲಿ ಬೆಳೆದು ಬಂದಿರುವ ಇವರು, ಅವರು ಹಾಕಿಕೊಟ್ಟ ಹಾದಿಯಲ್ಲಿ ಶಾಸನಗಳ ಸಂಶೋಧನೆಯ ಕ್ಷೇತ್ರಕ್ಕೆ ಬಂದವರು. ಇವರೆಲ್ಲರ ಚಿಂತನೆ ವಿಚಾರ ಅಧ್ಯಯನ ಮಾರ್ಗದರ್ಶನದ ಪ್ರಭಾವಗಳಿಂದ ಪ್ರಭಾವಿತರಾಗಿ ಡಾ. ಪರಮಶಿವಮೂರ್ತಿಯವರು ತಮ್ಮದೇ ಆದ ಶಾಸನ ಶಾಸ್ತ್ರದ ಹಾದಿಯನ್ನು ನಿರ್ಮಿಸಿಕೊಂಡವರು. ಶಾಸನ ಶಾಸ್ತ್ರದ ಅಧ್ಯಯನ ಸಂಶೋಧನೆ ಕಾರ್ಯ ಹೆಚ್ಚು ಶ್ರಮವನ್ನು ಹಾಕುವಂತ ಕ್ಷೇತ್ರ ಹಾಗೂ ಶಾಸನ ಶಾಸ್ತ್ರದ ಸಂಶೋಧನೆಯಲ್ಲಿ ಬಹು ಮುಖ್ಯವಾಗಿ ಶಾಸನ ಶಾಸ್ತ್ರದ ಲಿಪಿ ಶಾಸ್ತ್ರ ಗೊತ್ತಿರಬೇಕು ಅದರೊಂದಿಗೆ ಸಂಸ್ಕೃತ, ಹಳೆಗನ್ನಡದ ಜ್ಞಾನ, ಪ್ರಭುತ್ವವಿರಬೇಕು ಮತ್ತು ಶಾಸನ ಕ್ಷೇತ್ರಕ್ಕೆ ಸಂಬಂಧಿಸಿದ ಚರಿತ್ರೆಯನ್ನು ಸಹ ಅಧ್ಯಯನ ಮಾಡಿರಬೇಕು, ಹೀಗಾದಾಗ ಮಾತ್ರ ಶಾಸನ ಶಾಸ್ತ್ರದಲ್ಲಿ ಸಾಧನೆಯನ್ನು ಮಾಡಲು ಸಾಧ್ಯ. ಪರಮಶಿವಮೂರ್ತಿಯವರು ಇವುಗಳನ್ನು ತಮ್ಮ ಶಾಸನ ಅಧ್ಯಯನ, ಕ್ಷೇತ್ರ ಕಾರ್ಯದಲ್ಲಿ ಅಳವಡಿಸಿಕೊಂಡು ಯಶಸ್ವಿಯಾದವರು.



ಕೃಷ್ಣದೇವರಾಯನಿಗಿಂತ ಪೂರ್ವದಲ್ಲಿ ಸಂಗಮ ಮನೆತನದ ಇಮ್ಮಡಿ ಹರಿಹರ ಮತ್ತು ಇಮ್ಮಡಿ ದೇವರಾಯ ಇವರು ವಿಜಯನಗರದ ಸಾಮ್ರಾಜ್ಯಕ್ಕೆ ಭದ್ರಬುನಾದಿಯನ್ನು ಹಾಕಿಕೊಟ್ಟವರು ಎಂಬುದನ್ನು ಶಾಸನಗಳ ವಿಶ್ಲೇಷಣೆಯ ಮೂಲಕ ವಿಜಯನಗರದ ಚರಿತ್ರೆಗೆ ಹೊಸ ಚರಿತ್ರಯ ಆಯಾಮವನ್ನು ಒದಗಿಸಿದವರು ಪರಮಶಿವಮೂರ್ತಿ ಅವರು. ಪ್ರೌಢದೇವರಾಯರ ಬಗ್ಗೆ ಅಧ್ಯಯನ ಮಾಡಲು ಆಕರಗಳ ಕೊರತೆ ಇತ್ತು ಆದರೆ ಮೊಟ್ಟಮೊದಲ ಬಾರಿಗೆ ಪ್ರೌಢದೇವರಾಯನಿಗೆ ಸಂಬಂಧಿಸಿದ ಸುಮಾರು 275 ಶಾಸನಗಳನ್ನು ಗುರುತಿಸುವುದರ ಮೂಲಕ ಪ್ರೌಢದೇವರಾಯ ಹಾಗೂ ಅವನ ಆಡಳಿದ ಮೇಲೆ ಹೊಸ ಚರಿತ್ರೆಯನ್ನು ಕಟ್ಟಿಕೊಟ್ಟವರು. ಕೃಷ್ಣದೇವರಾಯನ ರಾಣಿ ಚೆನ್ನಾದೇವಿಯ ಬಗ್ಗೆ ಇದ್ದ ಪೂರ್ವಗ್ರಹಗಳ ಬಗ್ಗೆ ಅಧ್ಯಯನಗಳನ್ನು ಮಾಡಿ, ಶಾಸನಗಳನ್ನು ಶೋಧಿಸಿ ಆಕೆ ವೇಶ್ಯೆ ಅಲ್ಲ ಕೃಷ್ಣದೇವರಾಯನ ರಾಣಿ ಎನ್ನುವುದನ್ನು ತಮ್ಮ ಶಾಸನಗಳ ಅಧ್ಯಯನದ ಮೂಲಕ ಜನಸಾಮಾನ್ಯರಿಗೂ ಅರ್ಥವಾಗುವಂತೆ ವಿಶ್ಲೇಷಣೆ ಮಾಡಿ ಚಿನ್ನ ದೇವಿ ಬಗ್ಗೆ ಇದ್ದ ಪೂರ್ವಗ್ರಹಗಳನ್ನು ತೆಗೆದ ಹಾಕಿದ ಕೀರ್ತಿ ಅವರಿಗೆ ಸಲ್ಲುತ್ತದೆ.
ಕನ್ನಡ ವಿವಿಯ ಕಾರ್ಯಚಟುವಟಿಕೆಗಳಿಗೆ ಅವಶ್ಯವಿದ್ದಲ್ಲಿ ಮಾತ್ರ ಹೊರಗಡೆಯ ಪ್ರಯಾಣಕ್ಕೆ ವಿಶ್ವವಿದ್ಯಾಲಯದ ವಾಹನವನ್ನು ಬಳಸುತ್ತಿದ್ದಾರೆ. ಉಳಿದ ಸಂದರ್ಭಗಳಲ್ಲಿ ಬಸ್ಸುಗಳಲ್ಲಿ ಪ್ರಯಾಣ ಮಾಡುತ್ತಿದ್ದಾರೆ. ಹೀಗೇಕೆ ಸರ್ ಎಂದರೆ, ಬೆಂಗಳೂರಿಗೆ ಹೋಗಿ ಬರಲು ಹತ್ತು ಸಾವಿರ ರೂ.ಗಳ ಡಿಸೇಲ್ ಬೇಕು. ಇದೇ ಹತ್ತು ಸಾವಿರ ಉಳಿದರೆ ತಾತ್ಕಾಲಿಕ ನೌಕರನಿಗೆ ಒಂದು ತಿಂಗಳ ಸಂಬಳ ವಾಗುತ್ತದೆ ಎಂದು ಬಸ್ಸಿನಲ್ಲಿ ಹೋಗಿ ಬರುತ್ತಿರುವ ಸರಳ ವ್ಯಕ್ತಿತ್ವದ ಕುಲಪತಿ ಡಾ. ಪರಮಶಿವ ಮೂರ್ತಿಯವರ ಆಡಳಿತವು ಡಾ.ಎಂ.ಎಂ ಕಲಬುರ್ಗಿಯವರ ಆಡಳಿತವನ್ನು ನೆನಪಿಸುತ್ತಿದೆ.

ಹಿಂದಿನ ತಲೆಮಾರಿನ ಹಿರಿಯ ಶಾಸನ ವಿದ್ವಾಂಸರು ರಾಜರುಗಳ, ಅವರ ಸಾಮ್ರಾಜ್ಯಗಳ ಮೇಲೆ ತಮ್ಮ ಗಮನ ಅಧ್ಯಯನವನ್ನು ಹರಿಸಿ ಅವುಗಳನ್ನೇ ಕೇಂದ್ರವಾಗಿರಿಸಿ ಕೊಂಡು ಶಾಸನಗಳ ವಿಶ್ಲೇಷಣೆಯನ್ನು ಮಾಡುತ್ತ ಬಂದಿದ್ದರು. ಆದರೆ ಶಾಸನಗಳ ಅಧ್ಯಯನವೆಂದರೆ ಕೇವಲ ರಾಜ ಮಹಾರಾಜರ ಚರಿತ್ರೆ ಅಷ್ಟೇ ಅಲ್ಲ, ಜನಸಾಮಾನ್ಯರ ಬಗ್ಗೆಯು ಶಾಸನಗಳಲ್ಲಿ ಮಹತ್ವವಾದ ಅಂಶಗಳಿವೆ ಎಂಬುದನ್ನು ಅಧ್ಯಯನ ಮಾಡಿ ಅದನ್ನು ಸಮಾಜಕ್ಕೆ ತೋರಿಸಿಕೊಟ್ಟವರು ಡಾ.ಡಿ.ವಿ.ಪರಮಶಿವಮೂರ್ತಿ ಅವರು. ದಾನ ಚಿಂತಾಮಣಿ ಅತ್ತಿಯಬ್ಬೆ, ವಿಜಯನಗರ ಸ್ಥಾಪಕ ವಿದ್ಯಾರಣ್ಯ, ಸಮಾಜ ಸುಧಾರಕ ತೋಂಟದ ಸಿದ್ದಲಿಂಗಯತಿ, ಕೃಷ್ಣದೇವರಾಯನ




ರಾಣಿ ಚೆನ್ನಾದೇವಿ, ಕರಸ್ಥಳದ ವೀರಣ್ಣೊಡೆಯ, ಮಹಾಸತಿ ದೇಕಬ್ಬೆ, ಪ್ರೌಢದೇವರಾಯನ ಆಡಳಿತ ಮೊದಲಾದವುಗಳನ್ನು ಕುರಿತು ಮೊದಲ ಬಾರಿಗೆ ಅಧ್ಯಯನ ಸಂಶೋಧನೆ ಮಾಡಿ ಅವರ ಬಗ್ಗೆ ಹೊಸ ಚರಿತ್ರೆಯನ್ನು ನಾಡಿಗೆ ಕಟ್ಟಿಕೊಟ್ಟ ಕೀರ್ತಿ ಇವರಿಗೆ ಸಲ್ಲುತ್ತದೆ. ಸಾಮ್ರಾಜ್ಯವೆಂದರೆ ವಿಜಯನಗರ ಸಾಮ್ರಾಜ್ಯ ಹಾಗೂ ರಾಜನೆಂದರೆ ಕೃಷ್ಣದೇವರಾಯನೊಬ್ಬನೇ ಎನ್ನುವಂತೆ ಚರಿತ್ರಕಾರರು ಬಿಂಬಿಸಿದ್ದರು. ಆದರೆ ಕೃಷ್ಣದೇವರಾಯನಿಗಿಂತ ಪೂರ್ವದಲ್ಲಿ ಸಂಗಮ ಮನೆತನದ ಇಮ್ಮಡಿ ಹರಿಹರ ಮತ್ತು ಇಮ್ಮಡಿ ದೇವರಾಯ ಇವರು ವಿಜಯನಗರದ ಸಾಮ್ರಾಜ್ಯಕ್ಕೆ ಭದ್ರಬುನಾದಿಯನ್ನು ಹಾಕಿಕೊಟ್ಟವರು ಎಂಬುದನ್ನು ಶಾಸನಗಳ ವಿಶ್ಲೇಷಣೆಯ ಮೂಲಕ ವಿಜಯನಗರದ ಚರಿತ್ರೆಗೆ ಹೊಸ ಚರಿತ್ರಯ ಆಯಾಮವನ್ನು ಒದಗಿಸಿದವರು ಪರಮಶಿವಮೂರ್ತಿ ಅವರು. ಪ್ರೌಢದೇವರಾಯರ ಬಗ್ಗೆ ಅಧ್ಯಯನ ಮಾಡಲು ಆಕರಗಳ ಕೊರತೆ ಇತ್ತು ಆದರೆ ಮೊಟ್ಟಮೊದಲ ಬಾರಿಗೆ ಪ್ರೌಢದೇವರಾಯನಿಗೆ ಸಂಬಂಧಿಸಿದ ಸುಮಾರು 275 ಶಾಸನಗಳನ್ನು ಗುರುತಿಸುವುದರ ಮೂಲಕ ಪ್ರೌಢದೇವರಾಯ ಹಾಗೂ ಅವನ ಆಡಳಿದ ಮೇಲೆ ಹೊಸ ಚರಿತ್ರೆಯನ್ನು ಕಟ್ಟಿಕೊಟ್ಟವರು. ಕೃಷ್ಣದೇವರಾಯನ ರಾಣಿ ಚೆನ್ನಾದೇವಿಯ ಬಗ್ಗೆ ಇದ್ದ ಪೂರ್ವಗ್ರಹಗಳ ಬಗ್ಗೆ ಅಧ್ಯಯನಗಳನ್ನು ಮಾಡಿ, ಶಾಸನಗಳನ್ನು ಶೋಧಿಸಿ ಆಕೆ ವೇಶ್ಯೆಅಲ್ಲ ಕೃಷ್ಣದೇವರಾಯನ ರಾಣಿ ಎನ್ನುವುದನ್ನು ತಮ್ಮ ಶಾಸನಗಳ ಅಧ್ಯಯನದ ಮೂಲಕ ಜನಸಾಮಾನ್ಯರಿಗೂ ಅರ್ಥವಾಗುವಂತೆ ವಿಶ್ಲೇಷಣೆ ಮಾಡಿ ಚಿನ್ನ ದೇವಿ ಬಗ್ಗೆ ಇದ್ದ ಪೂರ್ವಗ್ರಹಗಳನ್ನು ತೆಗೆದ ಹಾಕಿದ ಕೀರ್ತಿ ಡಾ. ಪರಮಶಿವ ಮೂರ್ತಿ ಅವರಿಗೆ ಸಲ್ಲುತ್ತದೆ.

ಶಾಸನ ಸಂಪಾದನಾ ಕಾರ್ಯದಲ್ಲಿ ಪರಮಶಿವಮೂರ್ತಿ ಹಾಗೂ ಇತರರಿಗೆ ವ್ಯತ್ಯಾಸಗಳಿವೆ ಏಕೆಂದರೆ ವಿದ್ವಾಂಸರುಗಳು ಶಾಸನಗಳಲ್ಲಿನ ರಾಜಕೀಯ ಅಂಶಗಳನ್ನು ಹೆಚ್ಚಾಗಿ ಪರಿಗಣಿಸುತ್ತಾರೆ. ಆದರೆ ಇವರು ಬಹು ಮುಖ್ಯವಾಗಿ ಸ್ಥಳೀಯ ಸಂಸ್ಕೃತಿಯ ಜೊತೆಗೆ ಶಾಸನದ ಪಠ್ಯವನು ಸಮೀಕರಿಸಲು ಹಾಗೂ ಭಾಷೆ ಮತ್ತು ಸಾಂಸ್ಕೃತಿಕ ಅಂಶಗಳಿಗೆ ಒತ್ತು ನೀಡುತ್ತಾರೆ. ಅಂದರೆ ಶಾಸನ ಪಠ್ಯವನ್ನು ಕಾರಣ ಮತ್ತು ಪರಿಣಾಮ ಕೇಂದ್ರಿತ ದೃಷ್ಟಿಯಿಂದ ಅಧ್ಯಯನ ಮಾಡುವುದು ಇವರ ವೈಶಿಷ್ಟ್ಯ. ಇವರ ಮತ್ತೊಂದು ವೈಶಿಷ್ಟವೆಂದರೆ ಇವರು ಗುರುತಿಸಿರುವ ಅಷ್ಟು ಶಾಸನಗಳು ಬಹುತೇಕ ಅಪ್ರಕಟಿತ ಶಾಸನಗಳೇ ಆಗಿವೆ. ಇವರ ಮೊದಲ ಲೇಖನವು ಸಹ ಗುಡಿಬಂಡೆಯ ಅಪ್ರಕಟಿತ ಜೈನ ಶಾಸನಗಳ ಬಗ್ಗೆಯೇ ಆಗಿದೆ. ಅಲ್ಲಿಂದ ಈತನಕದವರಿಗೆ ಬಹುತೇಕ ಅಪ್ರಕಟಿತ ಶಾಸನಗಳನ್ನೇ ಗುರುತಿಸಿ ಲೇಖನಗಳನ್ನು ಪ್ರಕಟಿಸಿರುವುದು ಇವರ ಕಠಿಣ ಪರಿಶ್ರಮ, ಕ್ರಿಯಾಶೀಲತೆಗೆ ಸಾಕ್ಷಿಯಾಗಿವೆ. ಇವರು ನೂರಕ್ಕೂ ಹೆಚ್ಚು ಸಂಶೋಧನಾ ಲೇಖನಗಳನ್ನು, ಸುಮಾರು 30ಕ್ಕೂ ಹೆಚ್ಚು ಸಂಶೋಧನಾ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಈ ಎಲ್ಲ ಪುಸ್ತಕಗಳು ಶಾಸನಗಳಿಗೆ ಸಂಬಂಧಿಸಿದವೇ ಆಗಿರುವುದು ಮತ್ತೊಂದು ವಿಶೇಷ. ಇವರ ಕೃತಿಗಳಂದರೆ ಶಾಸನ ಸಂಶೋಧನೆ, ಸಂಶೋಧನೆಯ ಸಿರಿ, ಬಳ್ಳಾರಿ ಜಿಲ್ಲೆಯ ಶಾಸನ ಸಂಪುಟ, ಕೊಪ್ಪಳ ಜಿಲ್ಲೆಯ ಶಾಸನಗಳು, ರಾಯಚೂರು ಜಿಲ್ಲಾ ಶಾಸನ ಸಂಪುಟ, ನೊಳಂಬರ ಶಾಸನಗಳು, ಪ್ರೌಢದೇವರಾಯನ ಶಾಸನ ಸಂಪುಟ, ಕೃಷ್ಣದೇವರಾಯನ ಶಾಸನ ಸಂಪುಟ, ತುಋುಗೊಳ್ ಸಂಕಥನ ಹೀಗೆ 30ಕ್ಕೂ ಹೆಚ್ಚು ಶಾಸನಕ್ಕೆ ಸಂಬಂಧ ಪಟ್ಟ ಕೃತಿಗಳನ್ನು ಪ್ರಕಟಿಸಿದ್ದಾರೆ. ಇವರ ಶಾಸನ ಕ್ಷೇತ್ರದ ಸಾಧನೆಯನ್ನು ಗುರುತಿಸಿ, ಕರ್ನಾಟಕ ಇತಿಹಾಸ ಅಕಾಡಮಿ 2015 ರಲ್ಲಿ ಡಾ.ಭಾ.ರಾ.ಗೋಪಾಲ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ವನಕಲ್ ಮಹಾಕ್ಷೇತ್ರದಿಂದ ಶ್ರೀ ಶಿವಕುಮಾರ ರಾಷ್ಟ್ರೀಯ ಪ್ರಶಸ್ತಿ, ತಾಯಿನಾಡು ಕನ್ನಡ ರಕ್ಷಣಾ ವೇದಿಕೆಯಿಂದ ವಿಶ್ವೇಶ್ವರಯ್ಯ ರತ್ನ ಪ್ರಶಸ್ತಿ, 2019 ರಲ್ಲಿ ಕರ್ನಾಟಕ ಇತಿಹಾಸ ಅಕಾಡೆಮಿಯಿಂದ ಶ್ರೀ ಪ್ರಶಸ್ತಿ, ಕನ್ನಡ ಭಾಷೆ ಮತ್ತು ಸಾಹಿತ್ಯದ ಕೊಡುಗೆಗಾಗಿ ಫಡಿರ್ನಾಂಡ್ಎಫ್ ಕಿಟಲ್ ಸ್ಮಾರಕ ಪ್ರಶಸ್ತಿ, ಸಹೃದಯ ಇತಿಹಾಸ ಶ್ರೀ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಪುಸ್ತಕ ಪ್ರಶಸ್ತಿ ಗೌರವ ಹೀಗೆ ಹತ್ತು ಹಲವು ಪ್ರಶಸ್ತಿ ಗೌರವಗಳು, ಗೌರವ ಸನ್ಮಾನಗಳು ಇವರಿಗೆ ಸಂದಿವೆ.

ಸತ್ಯದ ಶೋಧನೆಯೇ ಸಂಶೋಧನೆ. ಇದೊಂದು ಗಂಭೀರವಾದ ಕ್ಷೇತ್ರ. ಈ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡು ಸತತ ನಲವತ್ತುವರ್ಷಗಳಿಂದ ತಮ್ಮ ಬದುಕನ್ನು ಇದಕ್ಕಾಗಿಯೇ ಅರ್ಪಿಸಿದ್ದಾರೆ. ಡಾ.ಪರಮಶಿವಮೂರ್ತಿಯವರು ವಿದ್ವತ್ ಪರಂಪರೆಯಿಂದ ಬಂದವರು. ಹಳೆಗನ್ನಡ, ಶಾಸನ, ತಾಳೆಗರಿ ಗಳ ಅಧ್ಯಯನ, ಗ್ರಂಥಸಂಪಾದನೆ, ಇತಿಹಾಸ, ಸಂಸ್ಕೃತಿ ಮುಂತಾದ ಕ್ಷೇತ್ರಗಳಲ್ಲಿ ಪಾಂಡಿತ್ಯವನ್ನು ಹೊಂದಿದ್ದಾರೆ. ಹೀಗಾಗಿಯೇ ಅಧ್ಯಯನ, ಸಂಶೋಧನೆಯನ್ನು ತಮ್ಮ ಜೀವನದ ಉಸಿರಾಗಿಸಿ ಕೊಂಡಿದ್ದಾರೆ.

ಡಾ.ಪರಮಶಿವಮೂರ್ತಿ ಅವರು. ಈಗ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳು. ಆದರೆ ಅವರು ಆ ಹುದ್ದೆಯಲ್ಲಿ ಬಿಮ್ಮನೆ ಕುಳಿತುಕೊಂಡು ಸಂತಸಗೊಂಡವರಲ್ಲ. ವಿಶ್ವವಿದ್ಯಾಲಯದ ರಜಾ ದಿನಗಳಲ್ಲಿ ಈಗಲೂ ಹಂಪಿಯ ಗುಡ್ಡ ಬೆಟ್ಟ ಬಂಡೆಗಳನ್ನು ಹುಡುಕುತ್ತಾ ಹಾಗೂ ಸ್ನೇಹಿತರಿಂದ ಬರುವ ಮಾಹಿತಿಗಳನ್ನು ಸಂಗ್ರಹಿಕೊಂಡು, ಶಾಸನಗಳ ಪತ್ತೆಗಾಗಿ ಹಳ್ಳಿ, ಹೊಲ ಗದ್ದೆ ಕೆರೆ ಕಟ್ಟೆಗಳನ್ನು ಹುಡುಕಿಕೊಂಡು ಹೋಗುತ್ತಿರುವುದು ಅವರ ಆಸಕ್ತಿ, ಉತ್ಸಾಹ,ಕ್ರಿಯಾಶೀಲತೆ,ಅವರು ಅಧ್ಯಯನಕ್ಕಾಗಿ ಹಾತೋರೆಯುವ ಅವರ ಮನಸ್ಸ ಹಾಗೂ ಅವರ ಬದ್ದತೆಯನ್ನು ತೋರಿಸುತ್ತದೆ.

ಸರಳತೆಗೆ ಹೆಸರಾದವರು ಡಾ.ಪರಮಶಿವ ಮೂರ್ತಿಯವರು. ಹೌದು ಪ್ರತಿಷ್ಠಿತ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದಾರೆ. ಆದರೆ ವಿಶ್ವವಿದ್ಯಾಲಯ ಸರ್ಕಾರದ ಅನುದಾನ ಇಲ್ಲದೆ ಸಂಕಷ್ಟವನ್ನು ಎದುರಿಸುತ್ತಿರುವುದು ರಿಂದ ಇವರು ಯಾವುದೆ ಅಬ್ಬರ, ದುಂದುವೆಚ್ಚಗಳಿಲ್ಲದೆ ಸರಳ ಅರ್ಥಪೂರ್ಣವಾದ ಆಡಳಿತವನ್ನು ನಡೆಸುತ್ತಿದ್ದಾರೆ. ಇದಕ್ಕೆ ಒಂದು ಸಣ್ಣ ಉದಾಹರಣೆಯೆಂದರೆ, ಅವಶ್ಯವಿದ್ದಲ್ಲಿ ಮಾತ್ರ ಹೊರಗಡೆಯ ಪ್ರಯಾಣಕ್ಕೆ ವಿಶ್ವವಿದ್ಯಾಲಯದ ವಾಹನವನ್ನು ಬಳಸುತ್ತಿದ್ದಾರೆ. ಉಳಿದ ಸಂದರ್ಭಗಳಲ್ಲಿ ಬಸ್ಸುಗಳಲ್ಲಿ ಪ್ರಯಾಣ ಮಾಡುತ್ತಿದ್ದಾರೆ. ಹೀಗೇಕೆ ಸರ್ ಎಂದರೆ, ಬೆಂಗಳೂರಿಗೆ ಹೋಗಿ ಬರಲು ಹತ್ತು ಸಾವಿರ ರೂ.ಗಳ ಡಿಸೇಲ್ ಬೇಕು. ಇದೇ ಹತ್ತು ಸಾವಿರ ಉಳಿದರೆ ತಾತ್ಕಾಲಿಕ ನೌಕರನಿಗೆ ಒಂದು ತಿಂಗಳ ಸಂಬಳ ವಾಗುತ್ತದೆ ಎಂದು ಬಸ್ಸಿನಲ್ಲಿ ಹೋಗಿ ಬರುತ್ತಿರುವ ಸರಳ ವ್ಯಕ್ತಿತ್ವದ ಕುಲಪತಿ ಡಾ. ಪರಮಶಿವ ಮೂರ್ತಿಯವರು. ಡಾ. ಎಂ ಎಂ ಕಲಬುರ್ಗಿಯವರು ಕುಲಪತಿಗಳಾಗಿದ್ದಾಗ ನಡೆಸಿದ ಆಡಳಿತ ಅವರ ವ್ಯಕ್ತಿತ್ವವನ್ನು ಕಂಡು ಸರಳ ಜನಸಾಮಾನ್ಯರ ಕುಲಪತಿ ಎನ್ನುತ್ತಿದ್ದರು. ಆದರೆ ಈಗ ಡಾ. ಪರಮಶಿವಮೂರ್ತಿಯವರ ಆಡಳಿತ ವ್ಯಕ್ತಿತ್ವವನ್ನು ನೋಡಿದಾಗ ಇವರು ಸಹ ಸರಳ ವ್ಯಕ್ತಿತ್ವದ, ಜನಸಾಮಾನ್ಯರ ಕುಲಪತಿಯೇ ಆಗಿದ್ದಾರೆ.

ಕವಿ ಮನಸು

## ಚಿಗುರಿದೆ ಆಸೆ



ಮುಗಿಲಿನ ನರ್ತನ ಗಗನದ ಬಯಲಲಿ
ಚಿಗುರಿಹುದಾಸೆ ಬುವಿಯಲ್ಲಿ

ಹಗಲಿರುಳೆನ್ನದೆ ಬಿಗುವಿನ ತಾಪವು
ಮುಗಿಯದ ಗೋಳು ಜಗದಲ್ಲಿ

ಕೊಳಗಳು ಬತ್ತಿವೆ ತಳವನು ತೋರಿವೆ
ಬೆಳಗಳಿಗೆಲ್ಲಿ ಜಲತರಲಿ

ಮಳೆಹನಿ ಸುರಿದರೆ ಹೊಲದಲಿ
ದುಡಿಯುವ
ಕಳಕಳಿ ತುಂಬಿ ರೈತರಲಿ

ಮಿಂಚಿನ ಬೆಳಕನು ಹಂಚಲು ಮೋಡವು
ಕುಂಚದ ಚಿತ್ರ ಬಾನೊಳಗೆ

ಸಂಚನು ಮಾಡದೆ ಸಿಂಚನ ಗೈಯಲು
ಮಿಂಚಿನ ಜೊತೆಗೆ ಮೆರವಣಿಗೆ

ಗುಡುಗಿನ ಸಹಚರ ಸಿಡಿಲಿನ ಸದ್ದಿಗೆ
ನಡುಗಿದೆ ಭೂಮಿ ಭಯದಲ್ಲಿ

ಕೊಡುವುದು ಮೇಘವು ಜಡಿಮಳೆ
ಭೂಮಿಗೆ
ಪಡಯಲು ತಾಳ್ಮೆ ನಮಗಿರಲಿ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

COLD PRESSED OILS
HEALTH Benefits



- Heart Healthy
- Diabetes Friendly
- Healthy Skin & More
- Hair Fall Control

Nandi Enterprises
C/o HAMPI TIMES
Valmiki Circle, HOSAPETE
9482599089

### ಸುತ್ತ ಮುತ್ತ ಕುಂದು-ಕೊರತೆ

ನಿಮ್ಮ ಸುತ್ತಮುತ್ತ ಮೂಲಭೂತ ಸೌಲಭ್ಯಗಳ ಕೊರತೆ, ನಿರ್ವಹಣೆ ನಿರ್ಲಕ್ಷ್ಯ, ಮಳೆ ಹಾನಿ ನೀವು ಕಣ್ಣಾರೆ ಕಂಡಿದ್ದೀರಾ? ಹಾಗಾದರೆ ಕೂಡಲೇ ಫೋಟೊ ಕ್ಲಿಕ್ಕಿಸಿ, ವೀಡಿಯೋದೊಂದಿಗೆ ನಿಮ್ಮ ಅಭಿಪ್ರಾಯಗಳನ್ನು ಹಂಪಿ ಟೈಮ್ಸ್ ದಿನಪತ್ರಿಕೆ 9448633038 ವಾಟ್ಸಪ್ ನಂಬರ್ ಗೆ ಕಳುಹಿಸಿ.

### ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಮತದಾನ ನಮ್ಮ ಹಕ್ಕಿನ ಮಹಾದಾನ..!




ಮತದ ಮಹತ್ವ ಅರಿತವನು ಮಾತ್ರ ಪ್ರಜಾಪ್ರಭುತ್ವಕ್ಕೆ ಹಿತಕರ. ರಾಜ್ಯದಲ್ಲಿ ಮೊದಲ ಹಂತದ ಮತದಾನ ಮುಗಿಯಿತು. ಇನ್ನು ಎರಡನೇ ಹಂತದ ಮತದಾನ 07.05.2024 ಕ್ಕೆ. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಇಂತಹ ಮತದಾನದ ದಿನಗಳು ಮಹತ್ವವಾಗಿರುತ್ತವೆ. ಏಕೆಂದರೆ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯ ಯಶಸ್ಸು ನಿಂತಿರುವುದೇ ಈ ಮತದಾನ ಪ್ರಕ್ರಿಯೆ ನೆಲೆಗಟ್ಟಿನ ಮೇಲೆ. ಮತದಾನ ಎನ್ನುವುದು ಭಾರತದಂತಹ ಬೃಹತ್ ಪ್ರಜಾಪ್ರಭುತ್ವ ರಾಷ್ಟ್ರಕ್ಕೆ ಒಂದು ರೀತಿಯಲ್ಲಿ ವರದಾನವಾಗಿದೆ.

ಜನರಿಂದ ಜನರಿಗಾಗಿ ಜನರೇ ತಮಗೆ ಬೇಕಾದಂತಹ ಜನಪ್ರತಿನಿದಿಗಳನ್ನು ಸರಕಾರಗಳನ್ನು ಆಯ್ಕೆಮಾಡಿಕೊಳ್ಳುವಂತಹ ಇಂತಹ ನಿಗದಿತ ಸಮಯಕ್ಕೆ ನಡೆಯುವ ಚುನಾವಣೆಗಳಿಗೆ ಈ "ಮತದಾನ" ಎನ್ನುವುದು ಬಹಳ ಪ್ರಾಮುಖ್ಯತೆಯನ್ನು ವಹಿಸುತ್ತದೆ. ಮತ ಚಲಾವಣೆಯ ಮಹತ್ವ ಮತ್ತು ಚುನಾವಣೆಯ ಪ್ರಕ್ರಿಯೆಯಲ್ಲಿ ನಾವು ಭಾಗವಹಿಸಬೇಕು ಮತ್ತು ಇತರರನ್ನೂ ಭಾಗವಹಿಸಲು ಪ್ರೋತ್ಸಾಹಿಸಬೇಕು. ಇಂತಹ ಪ್ರೋತ್ಸಾಹದಾಯಕ ಹಲವಾರು ಕೆಲಸಗಳನ್ನು ಸರಕಾರದ ಜೊತೆ ಜೊತೆಗೆ, ಇತರೆ ಸಂಘ ಸಂಸ್ಥೆಗಳು ತಮ್ಮ ಸ್ವಾಆಸಕ್ತಿಯ ಮೇರೆಗೆ ಮತದಾನ ಜಾಗೃತಿಯನ್ನು ಒಂದು ಆಂದೋಲನದಂತೆ ಹಮ್ಮಿಕೊಳ್ಳಬೇಕು.

ವಿಶೇಷವಾಗಿ ಹಳಬರ ಜೊತೆ ಜೊತೆಗೆ ವಯಸ್ಕ ಹೊಸ ಮತದಾರರ ನೋಂದಾವಣೆಯನ್ನು ಮತ್ತು ಅವರು ಮತದಾನದಲ್ಲಿ ಧನಾತ್ಮಕವಾಗಿ ಭಾಗವಹಿಸುವಂತೆ ಪ್ರೋತ್ಸಾಹಿಸಲು ಕೂಡ ಮತ್ತು ಅಗತ್ಯ ನೀತಿ ನಿಯಮಗಳನ್ನು ಸುಗಮಗೊಳಿಸಲು ಹಾಗೂ ಗರಿಷ್ಠ ಗೊಳಿಸಲು ಎಲ್ಲರೂ ಪ್ರಯತ್ನಿಸಬೇಕು. ಈಗಾಗಲೇ ಇಂತಹ ಅನೇಕ ಕಾರ್ಯಕ್ರಮಗಳನ್ನು ಸರಕಾರ ಹಮ್ಮಿಕೊಂಡು ಜನರಲ್ಲಿ ಜಾಗೃತಿಯನ್ನು ಮೂಡಿಸುತ್ತಿದೆ.

ಮತದಾನ ಎನ್ನುವುದೊಂದು ಮಹಾಯಜ್ಞಾನದಂತೆ ಈ ಮತದಾನದ ಬಗ್ಗೆ ಜಾಗೃತಿ ಒಬ್ಬರಿಂದ ಮಾತ್ರ ಸಾಧ್ಯವಿಲ್ಲ. "ಹನಿ ಹನಿ ಗೂಡಿದರೆ ಹಳ್ಳ" ಎನ್ನುವಂತೆ ಎಲ್ಲರೂ ಕೂಡ ಈ ವಿಷಯದಲ್ಲಿ ಕೈಜೋಡಿಸಬೇಕು.

ಚುನಾವಣಾ ಆಯೋಗವು ನೇಮಿಸಿರುವಂತಹ ಅಧಿಕಾರಿಗಳ ಜೊತೆ ಜೊತೆಗೆ, ಇನ್ನಿತರ ಸರ್ಕಾರಿ ಅಧಿಕಾರಿಗಳು ಸೇರಿದಂತೆ ನಾವು ನೀವೆಲ್ಲರೂ ಕೈಜೋಡಿಸಬೇಕು. ಇದಕ್ಕೆ ಪೂರಕವಾದಂತಹ ತಂತ್ರಜ್ಞಾನದ ಸಹಾಯವನ್ನು ತೆಗೆದುಕೊಂಡು ಸಮಾಜಿಕ ಮಾಧ್ಯಮಗಳಲ್ಲಿ ಮತದಾನಕ್ಕೆ ಸಂಬಂಧಪಟ್ಟಂತೆ ಜಾಗೃತಿಯನ್ನು ಮೂಡಿಸಬೇಕು. ಮತದಾನದ ಕುರಿತಾಗಿ ಪ್ರತಿಯೊಬ್ಬರೂ ಯಾವ ರೀತಿ ನೋಂದಾವಣೆ ಮಾಡಿಕೊಳ್ಳಬೇಕು, ಮತದಾನ ಹೇಗೆ ಮಾಡಬೇಕು, ಎಂಬೆಲ್ಲ ಅಂಶಗಳನ್ನು ತಿಳಿಸಬೇಕು

ವಿಶೇಷವಾಗಿ ಮತದಾನದ ಪ್ರಕ್ರಿಯೆಯಲ್ಲಿ ಎಲ್ಲಾ ವರ್ಗದ ಜನರಿಗೂ ಕೂಡ ಭಾಗವಹಿಸುವ ವ್ಯವಸ್ಥೆಯನ್ನು ,ಮತದಾನದ ಸೌಲಭ್ಯಗಳನ್ನು ನೀಡಬೇಕು. ಅದರಲ್ಲೂ ಹಿರಿಯ ಜೀವಿಗಳು, ದಿವ್ಯಂಗರಿಗೆ ವಿಶೇಷ ವ್ಯವಸ್ಥೆ, ಜೊತೆಗೆ ಅವರ ಮನೆಯಿಂದ ಮತದಾನದ ಕೇಂದ್ರಕ್ಕೆ ವಾಹನದ ವ್ಯವಸ್ಥೆ ಎಲ್ಲವನ್ನು ಕೂಡ ಸರಕಾರ ಒದಗಿಸುತ್ತಿರುವುದು ಹೆಮ್ಮೆಯ ವಿಚಾರ. ಈಗಾಗಲೇ 80 ತುಂಬಿದ ಮತದಾರರ ಮನೆಗೆ ಹೋಗಿ ಮತದಾನದ ವ್ಯವಸ್ಥೆ ಕಲ್ಪಿಸಲಾಗಿರುವುದು ಒಂದು ಉದಾಹರಣೆಯಾಗಿದೆ.

ಅದೇ ರೀತಿಯಲ್ಲಿ ಅನಾರೋಗ್ಯದಿಂದ ಬಳಲುವವರೆಗೂ, ಹಾಸ್ಪತ್ರೆಗಳಲ್ಲಿ ಅಡ್ಮಿಟ್ಟಾದ ಎಲ್ಲಾ ರೋಗಿಗಳಿಗೋ ಕೂಡ ಮತದಾನದ ಮಹತ್ವವನ್ನು ತಿಳಿಸಿ ಮತ ಚಲಾಹಿಸಲು ಸೌಕರ್ಯಗಳನ್ನು ಚುನಾವಣೆ ಆಯೋಗ ಒದಗಿಸಿದೆ ಇತರರೂ ಸಹ ಸಹಕರಿಸಬೇಕು. ಏಕೆಂದರೆ ವಯಸ್ಸಾದವರು ಅನಾರೋಗ್ಯದಿಂದ ಇರುವವರು ಮನೆಯಿಂದಲೇ ಮತ ಹಾಕಲು ಕೂಡ ವ್ಯವಸ್ಥೆ ಯಶಸ್ವಿಯಾಗಿದೆ.

ಸದ್ಯದ ಚುನಾವಣೆಯಲ್ಲಿ "ಸಖೀ ಬೂತ್" ಗಳು ಹೆಚ್ಚು ಆಕರ್ಷಕ ಮತ್ತು ಅರ್ಥಪೂರ್ಣ ಕೂಡ. ಅಲ್ಲಿ ಮಹಿಳೆಯರೇ ಎಲ್ಲಾ ಕೆಲಸಗಳನ್ನು ಮಾಡುತ್ತಾರೆ. ಇತ್ತೀಚಿನ ಚುನಾವಣೆಗಳಲ್ಲಿ ಆಯಾ ಸ್ಥಳೀಯವಾಗಿ ಅಥವಾ ತಮ್ಮ ಅವಶ್ಯಕತೆಗೆ ತಕ್ಕಂತೆ ಆಕರ್ಷಕ ಚಿತ್ರಗಳನ್ನು ಕೂಡ ಹಾಕುತ್ತಾರೆ. ಸಾದನೆಗೈದಂತಹ ಜನರಿಂದ ಪ್ರೋತ್ಸಾಹದ ಬರಹಗಳು, ಪೋಸ್ಟರ್ ಗಳು, ಸಿನಿಮಾತಾರೆಯರು, ಕ್ರೀಡಾಪಟುಗಳಿಂದ ಮತದಾನ ಜಾಗೃತಿಯನ್ನು ಮಾಡುತ್ತಿರುವುದು, ಅನೇಕ ಮತಗಟ್ಟೆ ಕೇಂದ್ರಗಳಲ್ಲಿ ಇದು ಯಶಸ್ವಿಯಾಗಿದೆ. ಈ ರೀತಿಯಾದ ಮತದಾನದಿಂದಾಂಗಿ ಮತದಾನದ ಶೇಕಡವಾರು ಅಂಶ ಹೆಚ್ಚಾಗಿ ಉತ್ತಮ ಜನಾಭಿಪ್ರಾಯ ಹೊರಹೊಮ್ಮಲು ಸಹಾಯಕವಾಗಿದೆ.

ನಮ್ಮಲ್ಲಿ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ, ರೂಂಗಳ ವ್ಯವಸ್ಥೆ ಜೊತೆಗೆ ಹೊರಗಡೆ ನಿಲುಗಡೆ, ಮುಂತಾದ ವ್ಯವಸ್ಥೆಗಳು, ಮೂಲಭೂತ ಸಮಸ್ಯೆಗಳನ್ನು ಇದ್ದರೂ ಕೂಡಾ ಅದನ್ನು ಪರಿಹರಿಸಿ ಮತದಾನ ಸುರಕ್ಷಿತವಾಗಿ ಮತದಾನ ನಡೆಯಲು ಅಗತ್ಯ ಎಲ್ಲಾ ಕ್ರಮಗಳನ್ನು ಕೈಗೊಂಡಿರುವುದು ಶ್ಲಾಗನೀಯ.

ಸರಿ ಹಾಗಾದರೆ ಇಷ್ಟೆಲ್ಲಾ ಸವಲತ್ತುಗಳನ್ನು ನಮ್ಮ ಭಾರತ ಚುನಾವಣಾ ಆಯೋಗವು ಒಂದಲ್ಲ ಒಂದು ರೀತಿಯಲ್ಲಿ ಹೊಸ ಹೊಸ ತಂತ್ರಜ್ಞಾನವನ್ನು ಬಳಸಿ ಮತದಾನದ ಶೇಕಡ ವಾರು ಹೆಚ್ಚಲು ಅಧಿಕಾರಿಗಳೊಂದಿಗೆ ಬಹಳ ಶ್ರಮವಿಸುತ್ತಿದೆ. ಆದರೂ ಕೂಡ ನಾವು ಹಲವು ಕಡೆ ನಮ್ಮ ಮತದಾನದ ಪ್ರಮಾಣ ನೂರಕ್ಕೆ ನೂರರಷ್ಟು ಆಗುತ್ತಿಲ್ಲ. ಕೆಲವು ಕಡೆ ನೂರಕ್ಕೆ ಪ್ರತಿಶತಃ 50ರಷ್ಟು ಮತದಾನ ಆಗಿರುವುದಿಲ್ಲ.



ಜಿ ಶಿವಕುಮಾರ್ ಸೋಗಿ
ಲೇಖಕರು, ಕಾರವಾರ ಕೈಗಾ

Scan For Digital Colourful
HAMPI TIMES E-paper

### ಮತದಾನ ಪ್ರಮಾಣ ಇಳಿಕೆಗೆ ಕಾರಣಗಳು ಹಲವಾರು ಇರಬಹುದು:

ಬಹುಮುಖ್ಯವಾಗಿ ಮತದಾರರ ನಿರಾಸಕ್ತಿ, ವ್ಯವಸ್ಥೆಯ ಬಗ್ಗೆ ಅಪನಂಬಿಕೆ, ನನ್ನ ಒಂದು ಮತದಿಂದ ಏನೂ ಆಗದು ಎನ್ನುವ ದೋರಣೆ ಇದು ಕೂಡ ಎಲ್ಲ ತಿಳಿದಂತ ನಗರವಾಸಿಗಳಿಂದಲೇ ಹೆಚ್ಚಾಗುತ್ತಿರುವುದು ಖೇಧಕರವಾದ ಸಂಗತಿ.

ಇಲ್ಲಿ ಇನ್ನೊಂದು ಗಮನಿಸಬೇಕಾದ ಅಂಶವೆಂದರೆ ಏನೂ ತಿಳಿಯದ ಅನಕ್ಷರಸ್ಥ ಗ್ರಾಮೀಣ ಪ್ರದೇಶದಲ್ಲಿ ಶೇಕಡವಾರು ಮತದಾನದ ಅಂಕಿ– ಅಂಶಗಳು ಹೆಚ್ಚುತ್ತಿವೆ. ನಗರ ಪ್ರದೇಶಗಳಲ್ಲಿ ಶೇಕಡವಾರು ಕಡಿಮೆಯಾಗುತ್ತಿದೆ! ಆತಂಕದ ವಿಚಾರವಾಗಿದೆ. ಕಾರಣ ನಮ್ಮಲ್ಲಿನ ವಿದ್ಯಾವಂತ ಮತದಾರರೇ ಮತದಾನ ಮಾಡಲು ಹಿಂದೇಟು ಹಾಕುತ್ತಿದ್ದಾರೆ!. ನನ್ನ ಒಂದು ಮತ ಹಾಕದಿದ್ದರೆ ಏನಾಗುತ್ತದೆ? ಅಥವಾ ನಾವು ಎಂತಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದರು ಅವರು ಮಾಡುವುದು ಅಷ್ಟೇ! ಎನ್ನುವಂತಹದ್ದು ಜೊತೆಗೆ ಅವರಿಂದ ನಮಗೆ ಯಾವುದೇ ಲಾಭವಾಗುತ್ತದೇ? ಎನ್ನುವ ನಿಲುವು ಮತದಾನದ ಶೇಕಡವರು ಕಡಿಮೆಯಾಗಲು ಪ್ರಮುಖ ಕಾರಣವಾಗಿದೆ.

ನಮಗೆಲ್ಲ ಗೊತ್ತಿರುವಂತೆ ನಮ್ಮ ಚುನಾವಣಾ ಆಯೋಗವು ಮತದಾನ ನಡೆಯುವ ದಿನಾಂಕದಂದು ಸರ್ಕಾರಿ, ಅರೆಸರ್ಕಾರಿ ಕಚೇರಿ, ಸಂಘ ಸಂಸ್ಥೆಗಳು, ಕೈಗಾರಿಕಾ ಪ್ರದೇಶಗಳಿಗೆ ಒಟ್ಟಾರೆಯಾಗಿ ಮತ ನಡೆಯುವ ಎಲ್ಲಾ ಸ್ಥಳಗಳಿಗೂ ಕೂಡ ಮತ ಹಾಕಲು ರಜೆಯನ್ನು ನೀಡಿರುತ್ತಾರೆ. ಆ ರಜೆಯನ್ನು ಸದುಪಯೋಗಪಡಿಸಿಕೊಂಡು ತಮ್ಮ ತಮ್ಮ ಊರುಗಳಿಗೆ ತಮ್ಮ ತಮ್ಮ ಮತ ಕೇಂದ್ರಗಳಿಗೆ ಹೋಗಿ ತಮ್ಮ ಅಮೂಲ್ಯವಾದ ಮತವನ್ನು ಹಾಕಲೇಬೇಕು ಎನ್ನುವ ದೃಢ ಸಂಕಲ್ಪವನ್ನು ನಾವು ನೀವೆಲ್ಲರೂ ಮಾಡಲೇಬೇಕು.

ಈ ನಿಟ್ಟಿನಲ್ಲಿ ಬಹುಮುಖ್ಯವಾಗಿ ಪ್ರತಿಯೋಬ್ಬರೂ ಮತದಾನ ಎನ್ನುವುದು ನಮ್ಮ ಹಕ್ಕು ಎನ್ನುವುದನ್ನು ಮರೆಯದೇ ಮತ ಚಲಾಹಿಸಬೇಕು. ಮತದಾನದಲ್ಲಿ ನಮ್ಮ ಯುವಜನತೆ ಪ್ರಮುಖ ಪಾತ್ರ ವಹಿಸಬೇಕು. ಏಕೆಂದರೆ ಅವರೆಲ್ಲರೂ ಹೊಸದಾಗಿ ಮತದಾನ ಮಾಡಲು ಅರ್ಹರಾಗಿದ್ದು, ಅಂತವರು ತಮ್ಮ ಮತ ಚಲಾಯಿಸುವುದನ್ನು ಮರೆಯಬಾರದು. ಜೊತೆಗೆ ಮೊದಲ ಮತದಾನದ ಸವಿ ಸವಿ ನೆನಪನ್ನು ಅವರು ತಮ್ಮ ಜೀವನದಲ್ಲಿ ಕಂಡುಕೊಳ್ಳಬೇಕು!. ತಾವು ಮತದಾನ ಹಾಕಿ ಇತರರನ್ನು ಕೂಡ ಮತದಾನ ಹಾಕಲು ಜಾಗೃತಿ ಮಾಡಿಸಬೇಕು. ತನ್ಮೂಲಕ ಪ್ರಜಾಪ್ರಭುತ್ವದ ಹಬ್ಬಕ್ಕೆ ಯಶಸ್ವಿಯಾಗಿ ಕೈಜೋಡಿಸಬೇಕು.

ಬನ್ನಿ ಈ ಸುಸಂದರ್ಭದಲ್ಲಿ ನಾವು ನೀವೆಲ್ಲರು ಸಂಕಲ್ಪ ಮಾಡೋಣ ನಮಗೆ ಬೇಕಾದ ಯೋಗ್ಯ ಅಭ್ಯರ್ಥಿಯನ್ನು ಆಯ್ಕೆ ಮಾಡಿಕೊಳ್ಳಲು ನಾವು ನಮ್ಮ ಅತ್ಯಮೂಲ್ಯವಾದ ಮತದಾನವನ್ನು ಮಾಡೋಣ.

ನೆನಪಿರಲಿ ಯಾವುದೇ ದಾಕ್ಷಿಣ್ಯಗಳಿಂದ ಪ್ರಭಾವಿತರಾಗದೆ, ಯಾವುದೇ ಅನಗತ್ಯ ಪ್ರೇರೇಪಣೆಗಳ ಬಗ್ಗೆ ಯೋಚಿಸದೇ, ಮುಕ್ತ ಮತ್ತು ನ್ಯಾಯ ಸಮ್ಮತ ವಿಚಾರಗಳೊಂದಿಗೆ ಗಹನವಾಗಿ ಯೋಚಿಸಿ ನಾವು ಹಾಕುವಂತಹ ನಮ್ಮ ಮತ ನಮ್ಮ ಪ್ರಜಾಪ್ರಭುತ್ವಕ್ಕೆ ಯಾವತ್ತೂ ಒಂದು ಘನತೆಯನ್ನು ಗೌರವವನ್ನು ತಂದುಕೊಡುತ್ತದೆ. "ನಮ್ಮ ಪ್ರತಿ ಒಂದೊಂದು ಮತವೂ ಕೂಡ ಬಹಳ ಅಮೂಲ್ಯವಾದದ್ದು". ಎಂಬುದನ್ನು ಯಾರೂ ಮರೆಯದಂತೆ ಜಾಗೃತರಾಗಿ ಮತದ ಹಕ್ಕನ್ನು ಚಲಾಯಿಸೋಣ. ಪ್ರಜಾಪ್ರಭುತ್ವದ ಮೇರು ಹಬ್ಬದಂತಿರುವ ಚುನಾವಣೆಯನ್ನು ನಮ್ಮ ಅಮೂಲ್ಯವಾದ ಮತ ಚಲಾಯಿಸಿ ಸಂಭ್ರಮಿಸೋಣ.

# ಕಾಂಗ್ರೆಸ್ ಕಾರ್ಯಕರ್ತರು ಬಿಜೆಪಿಗೆ ಸೇರ್ಪಡೆ

**ಜಿಲ್ಲಾಧ್ಯಕ್ಷ ನವೀನ್ ಕುಮಾರ್ ಗುಳಗಣ್ಣನವರ್ ಹೇಳಿಕೆ । ಕೊಪ್ಪಳ ಲೋಕಸಭಾ ಕ್ಷೇತ್ರ ಬಿಜೆಪಿ ಭದ್ರಕೋಟೆ । ಡಾ.ಬಸವರಾಜ ಕೆ.ಶರಣಪ್ಪ ಗೆಲುವು ನಿಶ್ಚಿತ**

■ ಹಂಪಿ ಟೈಮ್ಸ್ ಕೊಪ್ಪಳ

ಬಿಜೆಪಿಯ ತತ್ವ ಹಾಗೂ ಸಿದ್ಧಾಂತವನ್ನು ಮೆಚ್ಚಿ ಗೊಂಡಬಾಳ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಹೀರೆಬಗನಾಳ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಕಾಂಗ್ರೆಸ್ ತೊರೆದು ಭಾರತೀಯ ಜನತಾ ಪಾರ್ಟಿ ಸೇರ್ಪಡೆಗೊಂಡರು.

ಜಿಲ್ಲಾಧ್ಯಕ್ಷ ನವೀನ್ ಕುಮಾರ್ ಗುಳಗಣ್ಣನವರ್ ಮಾತನಾಡಿ, ಕೊಪ್ಪಳ ಲೋಕಸಭಾ ಕ್ಷೇತ್ರ ಬಿಜೆಪಿಯ ಭದ್ರಕೋಟೆಯಾಗಿದೆ. ಸತತ ಮೂರು ಬಾರಿ ಬಿಜೆಪಿ ಗೆಲುವು ಸಾಧಿಸಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ



ನೇತೃತ್ವದ ಬಿಜೆಪಿ ಸರ್ಕಾರದ ಆಡಳಿತ ಮೆಚ್ಚಿ ಕ್ಷೇತ್ರದಲ್ಲಿನ ಕಾಂಗ್ರೆಸ್ ಕಾರ್ಯಕರ್ತರು ಬಿಜೆಪಿಗೆ ಬರುತ್ತಿದ್ದು, ಈ ಬಾರಿಯೂ ಬಿಜೆಪಿ ಅಭ್ಯರ್ಥಿ ಡಾ.ಬಸವರಾಜ ಕೆ.ಶರಣಪ್ಪ ಗೆಲುವು ಸಾಧಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ರಾಜ್ಯ ಬಿಜೆಪಿಯ ಕಾರ್ಯದರ್ಶಿ ಶರಣು ತಳ್ಳಿಕೇರಿ, ಗಂಗಾವತಿ ವಿಧಾನಸಭಾ ಕ್ಷೇತ್ರದ ಶಾಸಕ ಗಾಲಿ ಜನಾರ್ದನ ರೆಡ್ಡಿ, ವಿಧಾನಸಭೆ ವಿರೋಧ ಪಕ್ಷದ ಮುಖ್ಯ ಸಚೇತಕ ದೊಡ್ಡನಗೌಡ ಪಾಟೀಲ್, ಮಾಜಿ ಸಚಿವ ಹಾಲಪ್ಪ ಆಚಾರ್, ಕೊಪ್ಪಳ ವಿಧಾನಸಭಾ ಕ್ಷೇತ್ರದ ಚುನಾವಣಾ ಸಂಚಾಲಕ ಪ್ರದೀಪ್ ಹಿಟ್ನಾಳ್ ಸೇರಿ ಬಿಜೆಪಿ ಪದಾಧಿಕಾರಿಗಳು ಉಪಸ್ಥಿತರಿದ್ದರು.



ಸಾವಯವ ಪದ್ಧತಿಯಲ್ಲಿ ಬೆಳೆದ ಗುಣಮಟ್ಟದ
ತೆಂಗಿನಕಾಯಿ, ಬಾಳೆ ಹಣ್ಣು, ತಾಜಾ ನುಗ್ಗೆಕಾಯಿ ಮತ್ತು
ನುಗ್ಗೆ ಸೊಪ್ಪಿಗಾಗಿ ಸಂಪರ್ಕಿಸಿರಿ
Organic Coconut & Banana, Moringa oleifera Available in best Price
98458 65204 ಮೃತ್ಯುಂಜಯನಗರ, ಹೊಸಪೇಟೆ

ಹಂಪಿ ಟೈಮ್ಸ್
HAMPI TIMES

## ಮತದಾನ ಮಾಡಿ ದೇಶದ ಅಭಿವೃದ್ಧಿಗೆ ಆಧಾರವಾಗಿ

### ನಿತ್ಯ ಪಂಚಾಂಗ

ಮಾಸ: ಚೈತ್ರ । ಸಂವತ್ಸರ: ಕ್ರೋಧಿ

**28–04–2024 – ಭಾನುವಾರ**

| | |
|---|---|
| ತಿಥಿ | : ಚತುರ್ಥಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಮೂಲ |
| ಯೋಗ | : ಶಿವ |
| ಕರಣ | : ಬಾಳವ |
| ಸೂರ್ಯೋದಯ | : 05:56:54 |
| ಸೂರ್ಯಾಸ್ತ | : 18:52:07 |
| ರಾಹು | : 17:15–18:52 |
| ಯಮಘಂಡ | : 12:25–14:01 |
| ಗುಳಿಕ | : 15:38–17:15 |

### ತುಂಗಭದ್ರಾ ನೀರಿನ ಮಟ್ಟ



ಶನಿವಾರ : 27–04–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1578.36 ಅಡಿ |
| ಒಳ ಹರಿವು | 00 ಕ್ಯೂಸೆಕ್ |
| ಹೊರ ಹರಿವು | 169 ಕ್ಯೂಸೆಕ್ |
| ಇಂದಿನ ಸಾಮರ್ಥ್ಯ | 3.726 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1576.13 ಅಡಿ |
| ಒಳ ಹರಿವು | 00 ಕ್ಯೂಸೆಕ್ |
| ಹೊರ ಹರಿವು | 258 ಕ್ಯೂಸೆಕ್ |
| ಸಾಮರ್ಥ್ಯ | 2.870 ಟಿಎಂಸಿ |

## ಅಯೋಧ್ಯೆ ಮಾದರಿಯಲ್ಲಿ ಅಂಜನಾದ್ರಿ ಅಭಿವೃದ್ಧಿ- ರೆಡ್ಡಿ

**ಹಂಪಿ ಟೈಮ್ಸ್ ಗಂಗಾವತಿ**

ಕೇಂದ್ರ ಸರ್ಕಾರದಿಂದ ವಿಶೇಷ ಅನುದಾನ ತಂದು ಅಂಜನಾದ್ರಿ ಸಮಗ್ರ ಅಭಿವೃದ್ಧಿ ಪಡಿಸಲಾಗುವುದು ಎಂದು ಶಾಸಕ ಗಾಲಿ ಜನಾರ್ದನ ರೆಡ್ಡಿ ಹೇಳಿದರು. ವಿಧಾನಸಭಾ ಕ್ಷೇತ್ರದ ಆನೆಗೊಂದಿ ಮಹಾಶಕ್ತಿ ಕೇಂದ್ರದ ಚುನಾವಣಾ ಬಹಿರಂಗ ಸಭೆಯಲ್ಲಿ ಮಾತನಾಡಿದ ಅವರು, ಶ್ರೀರಾಮಜನ್ಮ ಭೂಮಿ ಅಯೋಧ್ಯೆಯಲ್ಲಿ ರೈಲ್ವೆ, ವಿಮಾನ ನಿಲ್ದಾಣ, ಹೆದ್ದಾರಿ, ಮೂಲಸೌಕರ್ಯ ಸೇರಿ ಸಾವಿರಾರು ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿ ಕಾಮಗಾರಿಗಳು ನಡೆದಿವೆ. ಅದರಂತೆ ಅಂಜನಾದ್ರಿ ಸಮಗ್ರ ಅಭಿವೃದ್ಧಿ ಮಾಡಲಾಗುವುದು ಎಂದು ಭರವಸೆ ನೀಡಿದರು.

ಕೊಪ್ಪಳ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ಬಸವರಾಜ ಕೆ. ಶರಣಪ್ಪ ಮಾತನಾಡಿ, ಜನತೆ ಮತ್ತೊಮ್ಮೆ ಮೋದಿಜೀ ಅವರು ಪ್ರಧಾನಮಂತ್ರಿ ಯಾಗಲಿ ಎಂದು ಹರಿಸಿ, ಹಾರೈಸುತ್ತಿದ್ದಾರೆ. ಜನತೆಯ ಆಶೀರ್ವಾದ, ಕೇಂದ್ರ ಸರ್ಕಾರದ ಜನಪರ ಯೋಜನೆಗಳು ಮೊದಲ ಬಾರಿಗೆ ಅಭ್ಯರ್ಥಿಯಾದ ನನಗೆ ಶ್ರೀರಕ್ಷೆಯಾಗಲಿದೆ. ಕಳೆದ ಹತ್ತು ವರ್ಷಗಳಲ್ಲಿ ಈ ದೇಶದಲ್ಲಿ ನಡೆದ ಅಭಿವೃದ್ಧಿ ಕಾರ್ಯಗಳನ್ನು ಮುಂದಿಟ್ಟುಕೊಂಡು ಮತಯಾಚನೆ ಮಾಡಿದರು.



ಈ ಸಂದರ್ಭದಲ್ಲಿ ಆನೆಗೊಂದಿ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಚಂದ್ರಶೇಖರ, ಗಂಗಾವತಿ ಬಿಜೆಪಿ ಗ್ರಾಮೀಣ ಮಂಡಲದ ಅಧ್ಯಕ್ಷ ಚನ್ನಪ್ಪ ಮಳಗಿ, ಮಾಜಿ ಶಾಸಕ ಪರಣ್ಣ ಮುನವಳ್ಳಿ, ಆನೆಗೊಂದಿ ರಾಜಮನೆತನದ ರಾಜಾ ಕೃಷ್ಣದೇವರಾಯ, ಪ್ರಮುಖರಾದ ಸಿದ್ರಾಮಸ್ವಾಮಿ, ತಿಪ್ಪೇರುದ್ರಸ್ವಾಮಿ, ರಾಜು ನಾಯಕ, ರುದ್ರೇಶ ಡ್ಯಾಗಿ, ವಿರೂಪಾಕ್ಷಪ್ಪ ಸಿಂಗನಾಳ, ಮನೋಹರ ಗೌಡ ಹೇರುರೂ, ದುರುಗಪ್ಪ ಆಗೋಲಿ, ಚನ್ನವೀರಗೌಡ ಕೋರಿ, ಹುಲಿಗೆಮ್ಮ ನಾಯಕ, ವಿಜಯ ಪದ್ಮಾ ಸೇರಿದಂತೆ ಉಭಯ ಪಕ್ಷದ ಪ್ರಮುಖರು, ಪದಾಧಿಕಾರಿಗಳು, ಕಾರ್ಯಕರ್ತರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

## ಅಗತ್ಯ ಸೇವೆಗಳ ಗೈರು ಹಾಜರಿ ಮತದಾರರ ಮತದಾನಕ್ಕಾಗಿ ಅಂಚೆ ಮತದಾನ ಕೇಂದ್ರ ಸೌಲಭ್ಯ

**ಹಂಪಿ ಟೈಮ್ಸ್ ಬಳ್ಳಾರಿ**

09–ಬಳ್ಳಾರಿ (ಪ.ಪಂ) ಲೋಕಸಭೆ ಸಾರ್ವತ್ರಿಕ ಚುನಾವಣೆಗೆ ಸಂಬಂಧಿಸಿದಂತೆ, ಅಗತ್ಯ ಸೇವೆಗಳ ವರ್ಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಅಂಚೆ ಮತ ಪತ್ರಗಳನ್ವಯ ಮತ ಚಲಾಯಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ.

ಅಂಚೆ ಮತ ಪತ್ರಗಳ ಮೂಲಕ ಮತ ಚಲಾಯಿಸಲು ಮೇ 01 ರಿಂದ 03 ರ ವರೆಗೆ ಬೆಳಿಗ್ಗೆ 09 ಗಂಟೆಯಿಂದ ಸಂಜೆ 05 ಗಂಟೆಯವರೆಗೆ ನಗರದ ರೈಲ್ವೇ ನಿಲ್ದಾಣದ ಎದುರುಗಡೆಯ ಜಿಲ್ಲಾಧಿಕಾರಿಗಳ ಕಚೇರಿಯ ಗಾಂಧಿಭವನದಲ್ಲಿ "ಅಂಚೆ ಮತದಾನ ಕೇಂದ್ರ"ವನ್ನು ತೆರೆಯಲಾಗಿದ್ದು, ಅಗತ್ಯ ಸೇವೆಗಳ ವರ್ಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ಮತ್ತು ಸಿಬ್ಬಂದಿಗಳು ಮತ ಚಲಾಯಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕೈಪಿಡಿ ವಿತರಿಸಿ ಮತದಾನ ಜಾಗೃತಿ

**ಹಂಪಿ ಟೈಮ್ಸ್ ಕಂಪ್ಲಿ**

ಲೋಕಸಭೆ ಸಾರ್ವತ್ರಿಕ ಚುನಾವಣೆ ಅಂಗವಾಗಿ ಮತದಾನ ಪ್ರಮಾಣ ಹೆಚ್ಚಿಸಲು ಕಂಪ್ಲಿ ಪಟ್ಟಣದಲ್ಲಿ ಹಲವಾರು ಸ್ವೀಪ್ ಕಾರ್ಯಕ್ರಮಗಳನ್ನು ಆಯೋಜಿಲಾಗುತ್ತಿದ್ದು, ಶುಕ್ರವಾರದಂದು ಜಿಲ್ಲಾಡಳಿತ, ಜಿಲ್ಲಾ ಸ್ವೀಪ್ ಸಮಿತಿ ಮತ್ತು ಕಂಪ್ಲಿ ತಾಲ್ಲೂಕು ಆಡಳಿತ, ತಾಲ್ಲೂಕು ಸ್ವೀಪ್ ಸಮಿತಿ ಹಾಗೂ ಪುರಸಭೆ ವತಿಯಿಂದ ಕಂಪ್ಲಿ ಪಟ್ಟಣದ 4ನೇ ವಾರ್ಡ್ ಚಪ್ಪದರಹಳ್ಳಿಯಲ್ಲಿ ಮತದಾರರ ಮಾರ್ಗದರ್ಶನ ಕೈಪಿಡಿ ವಿತರಿಸಿ ಮತದಾನ ಜಾಗೃತಿ ಮೂಡಿಸಲಾಯಿತು. ಕಂಪ್ಲಿ ಪುರಸಭೆ ಸಮುದಾಯ ಸಂಘಟನಾಧಿಕಾರಿ ವಸಂತಮ್ಮ ಅವರು ಮಾತನಾಡಿ, ಮೇ 07 ರಂದು ಎಲ್ಲರೂ ತಪ್ಪದೇ ಮತದಾನ ಮಾಡಬೇಕು. ನಿಮ್ಮ ಅಕ್ಕ–ಪಕ್ಕದವರಿಗೂ ಮತದಾನ ಮಾಡುವಂತೆ ತಿಳಿಸಬೇಕು. ಮತದಾನ ದಿನದಂದು ಯಾವುದೇ ಕೆಲಸವಿಲ್ಲವೆಂದು ಯಾರೂ ಮತದಾನ ಪ್ರಕ್ರಿಯೆಯಿಂದ ತಪ್ಪಿಸಿಕೊಳ್ಳುವಂತಿಲ್ಲ. ಪ್ರತಿಯೊಬ್ಬರೂ ಮತದಾನದ ಮೂಲಕ ಸಮರ್ಥರನ್ನು ಆಯ್ಕೆ ಮಾಡಬೇಕು. ದೇಶದ ಅಭಿವೃದ್ಧಿಗೆ ಕೈಜೋಡಿಸಬೇಕು ಎಂದರು.

## ವಿಶೇಷ ಚೇತನರ ವಿಶೇಷ ಸೌಲಭ್ಯಗಳ ಒಂದು ನೋಟ

ಭಾರತ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆ ಪ್ರಪಂಚದ ಬಹುದೊಡ್ಡ ವ್ಯವಸ್ಥೆ. ನಮ್ಮ ದೇಶದ ಹಿರಿಮೆ ಗರಿಮೆ ಇರುವುದು ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ. ದೇಶದ ಜನತಂತ್ರ ರಚನೆಗೆ ಭಾರತದ ಕಟ್ಟಕಡೆಯ ವ್ಯಕ್ತಿಯು ಕೂಡ ಛಾಪು ಒತ್ತುವ ಸುವರ್ಣ ಅವಕಾಶ ನಮ್ಮ ಸಂವಿಧಾನ ಒದಗಿಸಿದೆ. ಜನತಂತ್ರದ ಹಣೆಬರಹವನ್ನು ಬರೆಯುವ ಅವಕಾಶ ಪ್ರತಿ ಭಾರತೀಯರಿಗೆ ಪ್ರತಿ ಐದು ವರ್ಷಕ್ಕೊಮ್ಮೆ ಒದಗಿ ಬರುತ್ತದೆ. ನಮ್ಮ ಮುಂದಿನ ಐದು ವರ್ಷ ದೇಶದ ಪಥವೂ ಯಾವ ದಿಕ್ಕಿಗೆ ಹೋಗಬೇಕೆನ್ನುವ ನಿರ್ಣಯವನ್ನು ತೆಗೆದುಕೊಳ್ಳುವ ಸುಸಂದರ್ಭ ಈ ಚುನಾವಣೆ ಪರ್ವದಲ್ಲಿ.

ದೇಶದಾದ್ಯಂತ ಚುನಾವಣೆ ವ್ಯವಸ್ಥೆಯಲ್ಲಿ ಪ್ರತಿ ಮತದಾರರು ಮತ ಚಲಾಯಿಸುವ ಮೂಲಕ ದೇಶದ ಆಡಳಿತ ಚುಕ್ಕಾಣಿ ಹಿಡಿಯುವ ಸರ್ಕಾರವನ್ನು ರಚಿಸುತ್ತಾರೆ. ಈ ಮತ ಚಲಾಯಿಸುವ ಹಕ್ಕು ಯಾವುದೇ ಜನಾಂಗ, ಜಾತಿ, ಧರ್ಮ, ಬಣ್ಣ, ಲಿಂಗಕ್ಕೆ ಸೇರಿರುವ ವ್ಯಕ್ತಿಯಾಗಿದ್ದರೂ ಸಹ ಅವರಿಗೆ 18 ವರ್ಷ ತುಂಬಿದ ಕೂಡಲೇ ಸಹಜವಾಗಿಯೇ ಈ ಸಾಂವಿಧಾನಿಕ ಹಕ್ಕು ಪ್ರಾಪ್ತವಾಗುತ್ತದೆ.

ಐದು ವರ್ಷಕ್ಕೊಮ್ಮೆ ಬರುವ ಈ ಪ್ರಜಾಪ್ರಭುತ್ವ ಹಬ್ಬದಲ್ಲಿ ಪ್ರತಿಯೊಬ್ಬರೂ ಜವಾಬ್ದಾರಿಯಿಂದ, ಸಂಭ್ರಮದಿಂದ, ನೈತಿಕತೆಯಿಂದ ಮತ್ತು ವಿವೇಚನೆಯಿಂದ ಭಾಗವಹಿಸುವ ಅಗತ್ಯವಿದೆ. ಮನೆಯಲ್ಲಿ ಯಾವುದೋ ಹಬ್ಬ ಅಥವಾ ಜಾತ್ರೆ ಆಚರಿಸುವಾಗ ದೂರದ ಊರುಗಳಿಂದ ಬಂದು ಮನೆಯಲ್ಲಿ ಒಟ್ಟಾಗಿ ಸೇರಿ ಸಂಭ್ರಮಿಸುವ ಹಾಗೆ, ನಮಗೆ ಈಗ ಲೋಕಸಭಾ ಚುನಾವಣೆಯ ಹಬ್ಬ ಬಂದಿದೆ. ಈ ಹಬ್ಬದಲ್ಲಿ ಪ್ರತಿಯೊಬ್ಬರು ಮತಗಟ್ಟೆಗೆ ಹೋಗಿ ತಮ್ಮ ಮತವನ್ನು ಚಲಾಯಿಸುವ ಮೂಲಕ ಸಂಭ್ರಮದಿಂದ ಪ್ರಜಾಪ್ರಭುತ್ವ ಹಬ್ಬವನ್ನು ಆಚರಿಸಬೇಕಿದೆ.




ಲೋಕಸಭಾ ಚುನಾವಣೆ–2024 ರ ಸುಸಂದರ್ಭದಲ್ಲಿ ಎಲ್ಲಾ ನಾಗರಿಕರಿಗೆ ಮತದಾನದ ಹಕ್ಕು ಇರುವ ಹಾಗೆ ವಿಶೇಷಚೇತನರು, ಹಿರಿಯ ನಾಗರಿಕರು ಹಾಗೂ ಲಿಂಗತ್ವ ಅಲ್ಪಸಂಖ್ಯಾತರಿಗೆ (ತೃತೀಯ ಲಿಂಗಿಗಳು) ಮತದಾನದ ಹಕ್ಕು ಸಂವಿಧಾನ ಒದಗಿಸಿದೆ. ವಿಶೇಷ ಚೇತನಳಾದ ನನ್ನನ್ನು ಕೊಪ್ಪಳ ಜಿಲ್ಲೆಯಲ್ಲಿ ಚುನಾವಣಾ ರಾಯಭಾರಿಯಾಗಿ ಮಾಡಿರುವುದು ನಮ್ಮ ವಿಶೇಷಚೇತನ ಸಮುದಾಯಕ್ಕೆ ಸಂದ ಗೌರವವಾಗಿದೆ. ಜೊತೆಗೆ ಹೆಚ್ಚಿನ ಜವಾಬ್ದಾರಿಯನ್ನು ಮೂಡಿಸಿದೆ.

ಚುನಾವಣಾ ಆಯೋಗವು ಈ ಚುನಾವಣೆಯ ಮತದಾನದ ಪ್ರಕ್ರಿಯೆಯಲ್ಲಿ ವಿಶೇಷಚೇತನರು ಮತ್ತು ಹಿರಿಯ ನಾಗರಿಕರು ನಿರ್ಭೀತಿಯಿಂದ ಹಾಗೂ ಸುಲಿಲತವಾಗಿ ಭಾಗವಹಿಸಲು ಅನುವಾಗುವಂತೆ ಸಾಕಷ್ಟು ಅನುಕೂಲಗಳನ್ನು ಮಾಡಿಕೊಟ್ಟಿದೆ. ಮುಖ್ಯವಾಗಿ ದೃಷ್ಟಿ ದೋಷವುಳ್ಳವರು, ಶ್ರವಣ ದೋಷವುಳ್ಳವರು, ದೈಹಿಕ ನ್ಯೂನ್ಯತೆ ಹೊಂದಿರುವವರು ಹಾಗೂ 85 ವರ್ಷಕ್ಕಿಂತ ಹೆಚ್ಚಿನ ವಯಸ್ಸಿನವರ ಸುಗಮ ಮತದಾನಕ್ಕೆ ಈಗಾಗಲೇ ಸಾಕಷ್ಟು ಸಿದ್ಧತೆಯನ್ನು ಮಾಡಿಕೊಂಡಿದೆ.

**ಮನೆಯಿಂದ ಮತದಾನ ಪ್ರಕ್ರಿಯೆ:** ನಾನು ಕೊಪ್ಪಳ ಜಿಲ್ಲೆಯ ವಿಶೇಷಚೇತನರ ಅಂಕಿಅಂಶವನ್ನು ಹೇಳುವುದಾದರೆ 18 ವರ್ಷಕ್ಕಿಂತ ಮೇಲ್ಪಟ್ಟ 16,175 ವಿಶೇಷಚೇತನರು ಮತದಾನದ ಹಕ್ಕನ್ನು ಹೊಂದಿದ್ದಾರೆ. ಇವರಲ್ಲಿ ಚಲನ ವಲನದ ತೊಂದರೆ ಇರುವ ಹಾಗೂ ಸಂಪೂರ್ಣವಾಗಿ ಹಾಸಿಗೆ ಮೇಲೆ ಮಲಗಿರುವವರು ಹಕ್ಕಿನಿಂದ ವಂಚಿತರಾಗಬಾರದೆನ್ನುವ ಉದ್ದೇಶದಿಂದ ಮತ್ತು ಅವರ ಕರ್ತವ್ಯವನ್ನು ನಿಭಾಯಿಸುವ ಉದ್ದೇಶದಿಂದ ಈಗಾಗಲೇ ಕೊಪ್ಪಳ ಜಿಲ್ಲೆಯಾದ್ಯಂತ 457 ವಿಶೇಷಚೇತನರು ಮತ್ತು 85 ವರ್ಷಕ್ಕಿಂತ ಮೇಲ್ಪಟ್ಟ 1,091 ಹಿರಿಯ ನಾಗರಿಕರು ಒಟ್ಟು 1,548 ಮತದಾರರು ಮನೆಯಿಂದಲೇ ಮತದಾನ ಮಾಡಲು ನಮೂನೆ 12(ಡಿ) ಅರ್ಜಿವನ್ನು ಭರ್ತಿ ಮಾಡಿಕೊಂಡಿರುತ್ತಾರೆ. ಮೇ–7 ಕ್ಕೆ ನಡೆಯುವ ಸಾರ್ವತ್ರಿಕ ಚುನಾವಣೆಗೂ ಮುನ್ನ ಈ ಮತದಾರರ ಮನೆ ಬಾಗಿಲಿಗೆ ಬ್ಲಾಕ್ ಹಂತದ ಅಧಿಕಾರಿಗಳ ತಂಡವೊಂದು ಹೋಗಿ ಗೌಪ್ಯವಾಗಿ ಮತವನ್ನು ಚಲಾಯಿಸಲು ವ್ಯವಸ್ಥೆ ಮಾಡುತ್ತಾರೆ.

**ಮತಗಟ್ಟೆಯಲ್ಲಿ ಸೌಲಭ್ಯ:** ವಿಶೇಷಚೇತನರು ಮತ್ತು ಹಿರಿಯ ನಾಗರಿಕರು ಮತಗಟ್ಟೆಗೆ ಬಂದು ಮತವನ್ನು ನಿರ್ಭೀತಿಯಿಂದ ಮತ್ತು ಸರಾಗವಾಗಿ ಮತ ಚಲಾಯಿಸಲು ಅನುವಾಗುವಂತೆ ರ್‍ಯಾಂಪ್ ವ್ಯವಸ್ಥೆ, ಗಾಲಿಕುರ್ಚಿ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ, ಆಸನದ ವ್ಯವಸ್ಥೆ, ಸ್ವಯಂಸೇವಕರ ವ್ಯವಸ್ಥೆ, ಕ್ಯೂನಲ್ಲಿ ನಿಲ್ಲದೇ ನೇರವಾಗಿ ಹೋಗಿ ಮತವನ್ನು ಚಲಾಯಿಸಲು ಸಂಪೂರ್ಣ ವ್ಯವಸ್ಥೆ ಮಾಡಲಾಗಿರುತ್ತದೆ. ಈ ಎಲ್ಲಾ ಸೌಲಭ್ಯವನ್ನು ಪಡೆದುಕೊಂಡು ನಮ್ಮ ಹಕ್ಕನ್ನು ಚಲಾಯಿಸುವುದು ನಮ್ಮ ಕರ್ತವ್ಯವಾಗಿರುತ್ತದೆ.

**ಮತಗಟ್ಟೆಯಲ್ಲಿ ಅಂಧ ಮತದಾರರಿಗೆ ಸೌಲಭ್ಯ:** ದೃಷ್ಟಿ ದೋಷವುಳ್ಳವರು ಮತ ಚಲಾಯಿಸಲು ತೊಂದರೆಯಾಗಬಾರದೆನ್ನುವ ಉದ್ದೇಶದಿಂದ ಇ.ವಿ.ಎಂ. ಯಂತ್ರದ ಮೇಲೆಯೇ ಬ್ರೈಲ್ ಲಿಪಿಯಲ್ಲಿ ಅಭ್ಯರ್ಥಿಗಳ ವಿವರಗಳನ್ನು ಹಾಗೂ ಬ್ರೈಲ್ ಲಿಪಿಯಲ್ಲಿಯೂ ಬ್ಯಾಲೆಟ್ ಪೇಪರ್ ಅನ್ನು ಎಲ್ಲಾ ಮತಗಟ್ಟೆಯಲ್ಲಿ ಒದಗಿಸಲಾಗಿರುತ್ತದೆ. ಈ ಬ್ರೈಲ್ ಲಿಪಿಯಲ್ಲಿಯೂ ಅಭ್ಯರ್ಥಿಯ ಹೆಸರು, ಚಿಹ್ನೆ ಮತ್ತು ಕ್ರಮಸಂಖ್ಯೆಗಳನ್ನು ಸ್ಪಷ್ಟವಾಗಿ ಓದಿಕೊಳ್ಳಲು ಅನುಕೂಲ ಮಾಡಿಕೊಳ್ಳಲಾಗಿದೆ. ಅರ್ಧ ಅಂಧ ಮತದಾರರಿಗೆ ಬ್ಯಾಲೆಟ್ ಪೇಪರ್ ಕಾಣಲು ಭೂತಗನ್ನಡಿಯನ್ನು ಮತಗಟ್ಟೆಯಲ್ಲಿ ಒದಗಿಸಲಾಗಿರುತ್ತದೆ. ದೃಷ್ಟಿದೋಷ ಉಳ್ಳವರಿಗೆ ಸಹಾಯ ಮಾಡಲು ಸ್ಥಳೀಯವಾಗಿ ಸ್ವಯಂಸೇವಕರು ಇರುತ್ತಾರೆ.

**ಸಕ್ಷಮ್ ಆ್ಯಪ್:** ಚುನಾವಣಾ ಆಯೋಗವು ವಿಶೇಷಚೇತನರು ಮತ್ತು ಹಿರಿಯ ನಾಗರಿಕರ ಸುಗಮ ಮತ ಚಲಾವಣೆಗಾಗಿ ಸಕ್ಷಮ್ ಆ್ಯಪ್ ಅನ್ನು ಅಭಿವೃದ್ಧಿ ಪಡಿಸಿದೆ. ಈ ಸಮುದಾಯದವರು ಮನೆಯಲ್ಲಿಯೇ ಕುಳಿತು ಮತಗಟ್ಟೆಯಲ್ಲಿ ನನಗೆ ಯಾವ ರೀತಿಯ ಸಹಾಯ ಬೇಕು ಎಂಬುದನ್ನು ಕೇಳಿ ಸಹಾಯ ಕೋರಬಹುದಾಗಿದೆ. ಉದಾಹರಣೆಗೆ ಮತಗಟ್ಟೆಯಲ್ಲಿ ನನಗೆ ಗಾಲಿಕುರ್ಚಿ ಬೇಕು ಅಥವಾ ಸ್ವಯಂಸೇವಕರ ಸಹಾಯ ಬೇಕು ಅಥವಾ ನನಗೆ ಮನೆಯಿಂದ ವಾಹನದ ವ್ಯವಸ್ಥೆ ಬೇಕು ಎನ್ನುವವರು ಈ ಆ್ಯಪ್ ಅನ್ನು ಮೊಬೈಲ್‌ನಲ್ಲಿ ಡೌನ್ಲೋಡ್ ಮಾಡಿಕೊಂಡು, ಸಹಾಯಕ್ಕಾಗಿ ನೋಂದಣಿ ಮಾಡಿಕೊಳ್ಳಬಹುದಾಗಿದೆ. ಮತದಾನದ ದಿನದಂದು ಅವರು ಕೇಳಿರುವ ಸಹಾಯವನ್ನು ಸ್ಥಳೀಯ ಅಧಿಕಾರಿಗಳು ಒದಗಿಸಲು ಬದ್ಧರಾಗಿರುತ್ತಾರೆ.

**ವೋಟರ್ ಹೆಲ್ಪ್‌ಲೈನ್:** ನಾನು ಮತ ಹಾಕಲು ಯಾವ ಮತಗಟ್ಟೆಗೆ ಹೋಗಬೇಕೆನ್ನುವ ಗೊಂದಲವಿದ್ದರೆ ಅಥವಾ ಮತದಾನದ ಸ್ಲಿಪ್ ನನಗೆ ಇನ್ನೂ ತಲುಪಿಲ್ಲ ಎಂದರೆ ಕೊರಗಬೇಕಿಲ್ಲ. ವೋಟರ್ ಹೆಲ್ಪಲೈನ್ ಆ್ಯಪ್ ಅನ್ನು ಮೊಬೈಲ್‌ನಲ್ಲಿ ಡೌನ್ಲೋಡ್ ಮಾಡಿಕೊಂಡು, ನಮ್ಮ ಎಪಿಕ್ ಕಾರ್ಡ್ ಸಂಖ್ಯೆ ನಮೂದಿಸಿದರೆ ಸಾಕು, ಕ್ಷಣಾರ್ಧದಲ್ಲಿ ನಾನು ಯಾವ ಮತಗಟ್ಟೆಗೆ ಹೋಗಬೇಕು, ನನ್ನ ಕ್ರಮಸಂಖ್ಯೆ ಏನು ಎಂಬಿತ್ಯಾದಿ ಮಾಹಿತಿಯು ಲಭ್ಯವಾಗುತ್ತದೆ. ಇದನ್ನು ತೋರಿಸಿ ನಾವು ಮತದಾನದ ಹಕ್ಕನ್ನು ಸಮರ್ಥವಾಗಿ ಚಲಾಯಿಸಬಹುದಾಗಿದೆ.

ವಿಶೇಷಚೇತನರೇ ಉತ್ಸಾಹದಿಂದ ಮತಗಟ್ಟೆಗೆ ಬಂದು ತಮ್ಮ ಕರ್ತವ್ಯವನ್ನು ಚಲಾಯಿಸುತ್ತಿರುವಾಗ ಎಲ್ಲಾ ಅನುಕೂಲವಿರುವ ನಾಗರಿಕರು ಯಾಕೆ ಮತದಾನದ ಹಬ್ಬದ ಸಂಭ್ರಮದಿಂದ ವಂಚಿತರಾಗಬೇಕು? ಮತದಾರರ ಅಂಗೈಯಲ್ಲಿ ಎಲ್ಲಾ ಮಾಹಿತಿಯು ಇರುವಾಗ ಕೇವಲ ಐದೇ ನಿಮಿಷ ದೇಶಕ್ಕಾಗಿ ಸಮಯವನ್ನು ಮೀಸಲಿಡುವುದರಲ್ಲಿ ಯಾಕೆ ಹಿಂದೇಟು ಹಾಕುವುದು? ಬನ್ನಿ ನಮಗೆ ನಾವೇ ಕೊಟ್ಟುಕೊಂಡ ಮತದಾನದ ಹಕ್ಕನ್ನು ನಿರ್ಭೀತವಾಗಿ ಯಾವುದೇ ಪ್ರೇರೇಪಣೆಗಳಿಗೆ, ಆಸೆ ಆಮಿಷಗಳಿಗೆ ಒಳಗಾಗದೇ ತಪ್ಪದೇ ಮತದಾನ ಮಾಡುತ್ತೇವೆಂದು ಪ್ರತಿಜ್ಞೆ ಮಾಡೋಣ. ನಮ್ಮ ದೇಶದ ಅಭಿವೃದ್ಧಿಗೆ ಕೈಜೋಡಿಸೋಣ.

**– ಪೂರ್ಣಿಮಾ ಯೋಳಭಾವಿ,**
**ಅಭಿವೃದ್ಧಿ ನಿರೀಕ್ಷಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕೊಪ್ಪಳ**

### ವಿಜ್ಞಾನ

## ನಾವು ಏಕೆ ಕಣ್ಣು ಮಿಟುಕಿಸುತ್ತೇವೆ?

**ಅರ್.ಬಿ.ಗುರುಬಸವರಾಜ**

ಸಹೋದರರಾದ ಭರತ ಮತ್ತು ಬಾಹುಬಲಿಯರ ದೃಷ್ಟಿಯುದ್ಧದ ಬಗ್ಗೆ ತಂದೆ ಮಕ್ಕಳಾದ ಅಭಿಷೇಕ ಮತ್ತು ತರುಣನಿಗೆ ಹೇಳುತ್ತಿದ್ದರು. ದೃಷ್ಟಿಯುದ್ಧ ಎಂದರೆ ಕಣ್ಣ ರೆಪ್ಪೆ ಬಡಿಯದೇ ಒಬ್ಬರನ್ನೊಬ್ಬರು ನೋಡುತ್ತಾ ಇರುವುದು. ಯಾರು ಮೊದಲು ಕಣ್ಣ ರೆಪ್ಪೆ ಬಡಿಯುವರೋ ಅವರು ಸೋತಂತೆ. ದೃಷ್ಟಿಯುದ್ಧದ ಬಗ್ಗೆ ಕೇಳುತ್ತಾ ಕುಳಿತ ಅಭಿಷೇಕನಿಗೆ ಪ್ರಶ್ನೆಯೊಂದು ಮೂಡಿತು. "ಅಪ್ಪ, ಹೌದು ನಾವೇಕೆ ಪದೇ ಪದೇ ಕಣ್ಣು ಮಿಟುಕಿಸುತ್ತೇವೆ? ಇದು ಒಳ್ಳೆಯದೋ ಅಥವಾ ಕೆಟ್ಟದೋ?" ಎಂದು ಪ್ರಶ್ನಿಸಿದ.

ಕಣ್ಣು ಮಿಟುಕಿಸುವುದು ಒಂದರ್ಥದಲ್ಲಿ ಒಳ್ಳೆಯದು. ಕಣ್ಣು ಮಿಟುಕಿಸುವಿಕೆ ಬಹುತೇಕ ವೇಳೆ ಅನೈಚ್ಛಿಕ ಪ್ರಕ್ರಿಯೆ. ನಾವು ಆಗಾಗ ಕಣ್ಣು ಮಿಟುಕಿಸಲು ಅನೇಕ ಕಾರಣಗಳಿವೆ. ಕಣ್ಣು ಮಿಟುಕಿಸುವುದು ಒಳಗಣ್ಣಿನ ಮೇಲ್ಮೈಯಲ್ಲಿನ ಕಣ್ಣೀರನ್ನು ಹರಡಲು ಸಹಾಯ ಮಾಡುತ್ತದೆ. ಕಣ್ಣು ಮಿಟುಕಿಸುವುದು ಸದಾ ಕಣ್ಣನ್ನು ತೇವವಾಗಿರಿಸುತ್ತದೆ ಮತ್ತು ಶುಷ್ಕತೆಯನ್ನು ತಡೆಯುತ್ತದೆ.



ಕಣ್ಣು ಮಿಟುಕಿಸುವುದು ದೃಷ್ಟಿ ವ್ಯವಸ್ಥೆಯನ್ನು ರಿಫ್ರೆಶ್ ಮಾಡಲು ಸಹಾಯ ಮಾಡುತ್ತದೆ. ಪ್ರತಿ ಬಾರಿ ನಾವು ಮಿಟುಕಿಸುವಾಗ ದೃಷ್ಟಿಗೋಚರ ಮಾಹಿತಿಯನ್ನು ಪ್ರಕ್ರಿಯೆ ಸ್ಪಷ್ಟಗೊಳ್ಳುತ್ತದೆ. ಇದು ಕಣ್ಣಿನ ಆಯಾಸ ಮತ್ತು ದೈಹಿಕ ಆಯಾಸವನ್ನು ತಡೆಯಲು ಸಹಾಯ ಮಾಡುತ್ತದೆ.

ಕಣ್ಣು ಮಿಟುಕಿಸುವುದು ಧೂಳು, ಗಾಳಿ ಮತ್ತು ಪ್ರಕಾಶಮಾನವಾದ ದೀಪಗಳಂತಹ ಉದ್ರೇಕಕಾರಿಗಳಿಂದ ಕಣ್ಣನ್ನು ರಕ್ಷಿಸಲು ಸಹಾಯ ಮಾಡುತ್ತದೆ. ನಾವು ಮಿಟುಕಿಸಿದಾಗ ಕಣ್ಣುರೆಪ್ಪೆಗಳು ತಡೆಗೋಡೆಯಾಗಿ ಕಾರ್ಯನಿರ್ವಹಿಸುತ್ತವೆ. ಈ ಉದ್ರೇಕಕಾರಿ ಅಂಶಗಳನ್ನು ಕಣ್ಣಿಗೆ ಪ್ರವೇಶಿಸದಂತೆ ತಡೆಯುತ್ತದೆ. ಈ ಸಂದರ್ಭದಲ್ಲಿ ಕಣ್ಣು ಮಿಟುಕಿಸುವುದು ಐಚ್ಛಿಕ ಕ್ರಿಯೆಯಾಗಿದೆ. ಒಂದು ವಸ್ತುವು ಕಣ್ಣಿಗೆ ತುಂಬಾ ಹತ್ತಿರ ಬಂದಾಗ ಉಂಟಾಗುವ ಸಂಭಾವ್ಯ ಹಾನಿಯನ್ನು ತಪ್ಪಿಸಿ ಕಣ್ಣನ್ನು ರಕ್ಷಿಸಲು ಮಿಟುಕಿಸುವಿಕೆ ಸಹಾಯ ಮಾಡುತ್ತದೆ.

ಕೆಲವು ಸಂದರ್ಭಗಳಲ್ಲಿ ಕಣ್ಣು ಮಿಟುಕಿಸುವುದು ಅಮೌಖಿಕ ಸಂವಹನದ ಒಂದು ರೂಪವಾಗಿದೆ. ಉದಾಹರಣೆಗೆ ಭಯ ಅಥವಾ ಒತ್ತಡವನ್ನು ಮರೆಮಾಚಲು ಕ್ಷಿಪ್ರವಾಗಿ ಮಿಟುಕಿಸುವುದು ಸಾಮಾನ್ಯ ಸಂಗತಿ. ಕೆಲವು ವೇಳೆ ಭಾವನೆಗಳನ್ನು ವ್ಯಕ್ತಪಡಿಸಲು ಪ್ರಜ್ಞಾಪೂರ್ವಕವಾಗಿ ಮಿಟುಕಿಸಬಹುದು. ಕೆಲವುವೇಳೆ ಕಣ್ಣು ಮಿಟುಕಿಸುವುದು ಒಪ್ಪಂದ ಅಥವಾ ಅಂಗೀಕಾರವನ್ನು ಸಂಕೇತವೂ ಆಗಿದೆ. ಒಟ್ಟಾರೆಯಾಗಿ ಕಣ್ಣು ಮಿಟುಕಿಸುವುದು ಒಂದು ಪ್ರಮುಖ ಸ್ವಯಂಚಾಲಿತ ಪ್ರಕ್ರಿಯೆಯಾಗಿದ್ದು, ಅದು ನಮ್ಮ ಕಣ್ಣುಗಳನ್ನು ಆರೋಗ್ಯಕರವಾಗಿಡಲು ಮತ್ತು ಸರಿಯಾಗಿ ಕಾರ್ಯನಿರ್ವಹಿಸಲು ಸಹಾಯ ಮಾಡುತ್ತದೆ.

## ಅಭ್ಯರ್ಥಿಗಳ ಪರ ಪ್ರಧಾನಮಂತ್ರಿಗಳ ಪ್ರಚಾರ ಮುಂಜಾಗ್ರತೆಗಾಗಿ ರೈಲು ಸಂಚಾರ ನಿಲುಗಡೆ

**ಹಂಪಿ ಟೈಮ್ಸ್ ಹೊಸಪೇಟೆ**

ಪ್ರಧಾನಮಂತ್ರಿಗಳು ಏಪ್ರಿಲ್ 28 ಮತ್ತು ಏಪ್ರಿಲ್ 29ರಂದು ವಿಜಯನಗರ ಜಿಲ್ಲೆಗೆ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಗಣ್ಯರ ಸುರಕ್ಷತೆಯ ದೃಷ್ಟಿಯಿಂದ ಮುಂಜಾಗ್ರತಾ ಕ್ರಮವಾಗಿ ಗಣ್ಯರು ಆಗಮಿಸುವ ಸಮಯದಲ್ಲಿ ರೈಲ್ವೆ ಸಂಚಾರವನ್ನು ಏ.28ರ ಸಂಜೆ 4.35ರಿಂದ ಸಂಜೆ 5.15ರವರೆಗೆ ಮತ್ತು ಏ.29ರಂದು ಬೆಳಗ್ಗೆ 10.30ರಿಂದ ಬೆಳಗ್ಗೆ 11.15ರವರೆಗೆ ಗಣ್ಯರು ಆಗಮಿಸುವ ಸಮಯದಲ್ಲಿ ರೈಲು ಸಂಚಾರವನ್ನು ನಿಲ್ಲಿಸುವಂತೆ ಜಿಲ್ಲಾ ದಂಡಾಧಿಕಾರಿಗಳು ಆಗಿರುವ ಜಿಲ್ಲಾಧಿಕಾರಿಗಳು ಸೌಥ್ ವೆಸ್ಟರ್ನ್ ರೈಲ್ವೆ ಹುಬ್ಬಳ್ಳಿಯ ಡಿವಿಜನಲ್ ರೈಲ್ವೆ ಮ್ಯಾನೇಜರ್ ಅವರಿಗೆ ಕೋರಿರುತ್ತಾರೆ.

## ಮನೆಯಿಂದಲೇ ಮತದಾನ ಮಾಡುವ ಪ್ರಕ್ರಿಯೆ ಪ್ರಾರಂಭ

**ಹಂಪಿ ಟೈಮ್ಸ್ ಕೊಪ್ಪಳ**

08–ಕೊಪ್ಪಳ ಲೋಕಸಭಾ ಸಾರ್ವತ್ರಿಕ ಚುನಾವಣೆ–2024ರ ಸಂಬಂಧ 12 ಡಿ ನಲ್ಲಿ ಅರ್ಜಿ ಸಲ್ಲಿಸಿರುವ 85 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ಮತ್ತು ವಿಶೇಷ ಚೇತನ ಮತದಾರರಿಗೆ ಹಾಗೂ ಕೋವಿಡ್ ಸೋಂಕಿತ ಮತದಾರರಿಗೆ ಮನೆಯಿಂದಲೇ ಮತದಾನ ಮಾಡುವ ಪ್ರಕ್ರಿಯೆ ಪ್ರಾರಂಭಿಸಲಾಗಿದೆ ಎಂದು ಕೊಪ್ಪಳ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳಾದ ನಲಿನ್ ಅತುಲ್ ಅವರು ತಿಳಿಸಿದ್ದಾರೆ.

ಏ.25 ಹಾಗೂ 26ರಂದು ನಡೆದ ಮತದಾನ ಪ್ರಕ್ರಿಯೆಯಲ್ಲಿ ಒಟ್ಟು ಮತದಾರರ ಪೈಕಿ 1,628 ಜನರಿಂದ ಮತದಾನವಾಗಿದ್ದು, ಅದರಲ್ಲಿ 1,120 ಹಿರಿಯ ನಾಗರಿಕರು ಹಾಗೂ 508 ವಿಶೇಷ ಚೇತನ ಮತದಾರರು ಮತ ಚಲಾಯಿಸಿರುತ್ತಾರೆ. ಈ ದಿನದಂದು 58–ಸಿಂಧನೂರು 59–ಮಸ್ಕಿ, 60–ಕುಷ್ಟಗಿ, 61– ಕನಕಗರಿ, 62–ಗಂಗಾವತಿ, 64–ಕೊಪ್ಪಳ, 92–ಸಿರಗುಪ್ಪ ಒಟ್ಟು 07 ವಿಧಾನಸಭಾ ಕ್ಷೇತ್ರಗಳಲ್ಲಿ ಮತದಾನ ಪ್ರಕ್ರಿಯೆ ಸುಗಮವಾಗಿ ಮತ್ತು ಶಾಂತ ರೀತಿಯಿಂದ ಮುಕ್ತಾಯಗೊಂಡಿರುತ್ತದೆ. ಪ್ರತಿದಿನ ಸಾಯಂಕಾಲ ಮತದಾನ ಮುಗಿದ ನಂತರ ಅಂಚೆ ಮತ ಪತ್ರಗಳನ್ನು ಆಯಾ ವಿಧಾನಸಭಾ ಕ್ಷೇತ್ರವಾರು ಕ್ರೋಢೀಕರಿಸಿ ನಿಯಮಾನುಸಾರ ಚುನಾವಣಾಧಿಕಾರಿಗಳ ಕಸ್ಟಡಿಗೆ ಒಪ್ಪಿಸಲು ಕ್ರಮ ವಹಿಸಲಾಗಿರುತ್ತದೆ ಎಂದು ಪ್ರಕಟಣೆ ತಿಳಿಸಿದೆ.



Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA